**ಕರಡು**

**ಕರ್ನಾಟಕ ರಾಜ್ಯ ಹೆಣ್ಣು ಮಕ್ಕಳ ಕಾರ್ಯನೀತಿ 2015**

**ಪ್ರಸ್ತಾವನೆ**

1.1. ರಾಷ್ಟ್ರೀಯ ಮಕ್ಕಳ ಕಾರ್ಯನೀತಿ 2013 ಮತ್ತು ಕರ್ನಾಟಕ ರಾಜ್ಯ ಮಕ್ಕಳ ಕಾರ್ಯನೀತಿ 2015 – ಈ ಎರಡೂ ಕಾರ್ಯನೀತಿಗಳು ಕರ್ನಾಟಕ ರಾಜ್ಯದಲ್ಲಿ ಮಕ್ಕಳು ಸದ್ಯ ಎದುರಿಸುತ್ತಿರುವ ಮತ್ತು ಅಲ್ಲಿ ಉದ್ಭವವಾಗುತ್ತಿರುವ ಸವಾಲುಗಳನ್ನು ಎದುರಿಸುವ ಹಕ್ಕುಗಳ ಪರಿಭಾಷೆಯ ದೃಷ್ಟಿಕೋನವನ್ನು ಮನ್ನಿಸುತ್ತವೆ. ಹೆಣ್ಣು ಮಕ್ಕಳು ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಎದುರಿಸುವ ತಾರತಮ್ಯಗಳನ್ನು ಮತ್ತು ಸಮಾಜದಲ್ಲಿನ ಅವರ ಸ್ಥಾನಮಾನ ಹಾಗೂ ಅವರ ಅಭಿವೃದ್ಧಿಯ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ಎದುರಿಸುವ ಬದ್ಧತೆಯನ್ನು ಕರ್ನಾಟಕ ರಾಜ್ಯ ಹೆಣ್ಣು ಮಕ್ಕಳ ಕಾರ್ಯನೀತಿಯನ್ನು ರೂಪಿಸಲು ತೆಗೆದುಕೊಂಡಿರುವ ನಿರ್ಣಯದ ಮೂಲಕ ಸರ್ಕಾರವು ತನ್ನ ಬದ್ಧತೆಯನ್ನು ಪ್ರತಿಪಾದಿಸುತ್ತದೆ.

**ವೈಚಾರಿಕತೆ**

1.2. ನಮ್ಮ ಸಮಾಜದಲ್ಲಿ ಕಂಡುಬರುವ ಗಂಡು ಮಕ್ಕಳ ಬಗೆಗಿನ ಅತಿಯಾದ ವ್ಯಾಮೋಹ, ಹೆಣ್ಣು ಭ್ರೂಣಹತ್ಯೆ, ಪುರುಷ ಪ್ರಧಾನ ಮನೋಭಾವ ಮತ್ತು ಲಿಂಗ ಸಂಬಂಧಿ ತಾರತಮ್ಯಗಳಿಂದಾಗಿ ಹೆಣ್ಣು ಮಕ್ಕಳು ಗರ್ಭಾವಸ್ಥೆಯಲ್ಲಿ, ಜನನದ ಸಂದರ್ಭದಲ್ಲಿ ಮತ್ತು ಬಾಲ್ಯಾವಸ್ಥೆಯಲ್ಲಿ ನಿರ್ಲಕ್ಷ್ಯಕ್ಕೆ ಮತ್ತು ಅವಗಣನೆಗೆ ಒಳಗಾಗುತ್ತಿದ್ದಾರೆ. ಈ ಸಂಗತಿಗಳು ಜನನದ ಸಂದರ್ಭದಲ್ಲಿನ ಗಂಡು–ಹೆಣ್ಣುಗಳ ನಡುವಿನ ಅನುಪಾತ, ಮಕ್ಕಳ ಲಿಂಗ ಅನುಪಾತ, ಮರಣ ಪ್ರಮಾಣ, ಅಪೌಷ್ಟಿಕತೆ, ಶಾಲಾ ದಾಖಲೀಕರಣ ಮತ್ತು ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಮುಂತಾದ ಸೂಚಿಗಳಲ್ಲಿನ ತಾರತಮ್ಯಗಳಲ್ಲಿ ಕಂಡುಬರುತ್ತವೆ. ಇವು ಅವರು ಶೋಷಣೆಗೆ ಮತ್ತು ದೌರ್ಜನ್ಯಕ್ಕೆ – ಉದಾಹರಣೆಗೆ ಬಲವಂತದ ಬಾಲಕಾರ್ಮಿಕತನ, ಬಾಲ್ಯ ವಿವಾಹಗಳು, ಹೆಣ್ಣು ಮಕ್ಕಳ ಮಾರಾಟ ಮತ್ತು ಲೈಂಗಿಕ ಶೋಷಣೆ ಮುಂತಾದವುಗಳಿಗೆ ಒಳಗಾಗುವ ಸಾಧ್ಯತೆಯನ್ನು ಉಲ್ಬಣಗೊಳಿಸುತ್ತವೆ. ನಮ್ಮ ರಾಜ್ಯದಲ್ಲಿ ಮಕ್ಕಳ ಸ್ಥಿತಿಗತಿಗಳಲ್ಲಿ ಪ್ರಾದೇಶಿಕ ಅಸಮಾನತೆಗಳಿವೆ, ಜಿಲ್ಲೆ–ಜಿಲ್ಲೆಗಳ ನಡುವೆ ತಾರತಮ್ಯಗಳಿವೆ, ಗ್ರಾಮೀಣ–ನಗರ ಪ್ರದೇಶಗಳ ನಡುವೆ ಭಿನ್ನತೆಗಳಿವೆ ಮತ್ತು ಸಾಮಾಜಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದ ಮಕ್ಕಳ, ವಿಕಲ ಚೇತನ ಮಕ್ಕಳ ಹಾಗೂ ವಲಸೆಗಾರರ ಕುಟುಂಬಗಳಿಗೆ ಸೇರಿದ ಮಕ್ಕಳ ಸ್ಥಿತಿಗತಿಯು ರಾಜ್ಯ ಮಟ್ಟದಲ್ಲಿನ ಮಕ್ಕಳ ಸ್ಥಿತಿಗತಿಯ ಸರಾಸರಿಗಿಂತ ಹೆಚ್ಚಿನ ದುಸ್ಥಿತಿಯಲ್ಲಿದೆ. ನಮ್ಮ ರಾಜ್ಯದಲ್ಲಿ 0–6 ವಯೋಮಾನದ ಮಕ್ಕಳ ಲಿಂಗ ಅನುಪಾತ 2001ರಲ್ಲಿ 946ರಷ್ಟಿದ್ದುದು 2011ರಲ್ಲಿ ಅದು 948ಕ್ಕೇರಿದೆ. ಆದರೆ 6–14 ವಯೋಮಾನದ ಮಕ್ಕಳ ಲಿಂಗ ಅನುಪಾತ 2011ರಲ್ಲಿ 930ರಷ್ಟಿದೆ ಮತ್ತು 15–18 ವಯೋಮಾನದ ಗುಂಪಿನಲ್ಲಿ ಅದು 904ರಷ್ಟು ಕೆಳಮಟ್ಟದಲ್ಲಿದೆ. ರಾಜ್ಯದ ಉತ್ತರ ಕರ್ನಾಟಕ ಪ್ರದೇಶದ ಎಂಟು ಜಿಲ್ಲೆಗಳಲ್ಲಿ ಮತ್ತು ದಕ್ಷಿಣ ಕರ್ನಾಟಕ ಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿ ಮಕ್ಕಳ ಲಿಂಗ ಅನುಪಾತವು ರಾಜ್ಯ ಸರಾಸರಿಯಾದ 943ಕ್ಕಿಂತ ಕಡಿಮೆಯಿದೆ. ಹೆಣ್ಣು ಶಿಶು ಮರಣ ಪ್ರಮಾಣ ಪ್ರತಿ ಸಾವಿರ ಜನನಕ್ಕೆ 32ರಷ್ಟಿದ್ದರೆ ಗಂಡು ಶಿಶು ಮರಣ ಪ್ರಮಾಣ 30ರಷ್ಟಿದೆ. ಮಕ್ಕಳ ಮರಣ ಪ್ರಮಾಣಕ್ಕೆ ಸಂಬಂಧಿಸಿದಂತೆ ಗಂಡು ಮಕ್ಕಳಲ್ಲಿ ಇದು 30ರಷ್ಟಿದ್ದರೆ ಹೆಣ್ಣು ಮಕ್ಕಳಲ್ಲಿ ಇದು 32ರಷ್ಟಿದೆ(ಎಮ್ ಡಿ ಜಿ ವರದಿ 2015). ಕೆಲವು ಜಿಲ್ಲೆಗಳಲ್ಲಿ ಇದು ಇನ್ನೂ ಅಧಿಕವಾಗಿದೆ. ಪ್ರಾಥಮಿಕ ಶಾಲೆಯಲ್ಲಿ ಶಾಲಾ ದಾಖಲಾತಿ ಶೇ96ರಷ್ಟಿದೆ. ಆದರೆ ಬಾಲಕರಿಗೆ ತುಲನೆ ಮಾಡಿದರೆ ಸರಾಸರಿ ಬಾಲಕಿಯರ ದಾಖಲಾತಿಯು 14–15 ವಯೋಮಾನದಲ್ಲಿ ಶೇ60 ಮತ್ತು 16–17 ವಯೋಮಾನದಲ್ಲಿ ಶೇ26ರಷ್ಟಿದೆ(ಎಮ್ ಡಿ ಜಿ ಗುಂಪು ವರದಿ 2015).

1.3. ಎಲ್ಲ ಮಕ್ಕಳು ಗಂಡಾಂತರಕ್ಕೆ, ಹಿಂಸೆಗೆ, ದೌರ್ಜನ್ಯಕ್ಕೆ ಮತ್ತು ಶೋಷಣೆಗೆ ಒಳಗಾಗುತ್ತಾರೆ. ನಮ್ಮ ಸಮಾಜದ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಗಂಡು ಮಕ್ಕಳಿಗಿಂತ ಹೆಚ್ಚಿನ ರೀತಿಯಲ್ಲಿ ಬಾಲ್ಯ ವಿವಾಹಕ್ಕೆ, ಲೈಂಗಿಕ ಪಿಡುಗಿಗೆ, ಅತ್ಯಾಚಾರಕ್ಕೆ, ಒಳಗಾಗುತ್ತಿದ್ದಾರೆ ಮತ್ತು ಹೆಚ್ಚಿನ ಗಂಡಾಂತರಗಳನ್ನು ಎದುರಿಸುತ್ತಿದ್ದಾರೆ. ಪ್ರತಿ ಐದು ಹೆಣ್ಣು ಮಕ್ಕಳಲ್ಲಿ ಇಬ್ಬರು 18 ವರ್ಷ ತುಂಬುವ ಮೊದಲೆ ರಾಜ್ಯದಲ್ಲಿ ಮದುವೆಯನ್ನು ಎದುರಿಸುತ್ತಿದ್ದಾರೆ. ಉತ್ತರ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಇದು ಶೇ50ಕ್ಕಿಂತ ಅಧಿಕವಾಗಿದೆ(ಸಿ ಆರ್. ಟಿ ವರದಿ) ಮತ್ತು ಉಳಿದ ನಾಲ್ಕು ಜಿಲ್ಲೆಗಳಲ್ಲಿ ಇದು ಶೇ30ರಷ್ಟಿದೆ. ಹೆಣ್ಣು ಮಕ್ಕಳು ದುಡಿಮೆಯಲ್ಲಿ ನಿರತರಾಗಿರುವುದು ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಕಂಡು

ಬರುತ್ತದೆ. ಶಾಲೆಯಿಂದ ಹೊರಗುಳಿದ ಹೆಣ್ಣು ಮಕ್ಕಳ ದುಡಿಮೆ ಸಹಭಾಗಿತ್ವ ಪ್ರಮಾಣದಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ. ಕೃಷಿಯಲ್ಲಿ ಅವರ ಪ್ರಮಾಣವು ಗಂಡು ಮಕ್ಕಳಿಗಿಂತ ಅಧಿಕವಾಗಿದೆ ಎಂದು ವರದಿ ಮಾಡಲಾಗಿದೆ. ಹೆಣ್ಣು ಮಕ್ಕಳು ಎದುರಿಸುವ ಗಂಡಾಂತರಗಳು ಪೂರ್ಣವಾಗಿ ವರದಿಯಾಗುತ್ತಿಲ್ಲ ಮತ್ತು ಬಹಿರಂಗಗೊಳ್ಳುತ್ತಿಲ್ಲ. ಆದರೆ ಬಾಲಕಿಯರ ಮೇಲಿನ ಅತ್ಯಾಚಾರ ಮತ್ತು ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳನ್ನು ದುಡಿಮೆಗೆ ದೂಡುತ್ತಿರುವುದು ಮತ್ತು ವೇಶ್ಯಗಾರಿಕೆಗಾಗಿ ಕರೆದೊಯ್ಯುತ್ತಿರುವುದು 1999–2013ರ ಅವಧಿಯಲ್ಲಿ ಹೆಚ್ಚಾಗಿರುವುದನ್ನು ಅಂಕಿಅಂಶಗಳು ತೋರಿಸುತ್ತವೆ(ಸ್ಟೇಟ್ ಕ್ರೈಮ್ ರಿಕಾರ್ಡ್ ಬ್ಯೂರೊ).

## ಪೀಠಿಕೆ

1.4. ಕರ್ನಾಟಕ ಸರ್ಕಾರದ ಮಕ್ಕಳ ಬಗೆಗಿನ ತನ್ನ ದೃಷ್ಟಿಕೋನ ಮತ್ತು 0–18 ವಯೋಮಾನದ ಮಕ್ಕಳ ಬಗೆಗಿನ ತನ್ನ ಬದ್ಧತೆಯನ್ನು ಹಾಗೂ ಈ ವಿಷಯವನ್ನು ಕುರಿತ ಗುರಿಗಳು, ಆದ್ಯತೆಗಳು ಮತ್ತು ಎಲ್ಲ ಮಕ್ಕಳ ಜೀವರಕ್ಷಣೆ, ಅಭಿವೃದ್ಧಿ ಮತ್ತು ಸಹಭಾಗಿತ್ವದ ಹಕ್ಕುಗಳ ವಿವರಗಳನ್ನು ಕರ್ನಾಟಕ ರಾಜ್ಯ ಮಕ್ಕಳ ಕಾರ್ಯನೀತಿ 2015ರಲ್ಲಿ ವಿವರವಾಗಿ ನೀಡಲಾಗಿದೆ. ಕರ್ನಾಟಕ ರಾಜ್ಯ ಮಕ್ಕಳ ಕಾರ್ಯನೀತಿಯಲ್ಲಿ ಗುರುತಿಸಿರುವ ಮಾರ್ಗದರ್ಶಿ ಸೂತ್ರಗಳು, ಮಕ್ಕಳ ಸಂರಕ್ಷಣೆಯ ಕ್ರಮಗಳು ಮತ್ತು ಅಲ್ಲಿ ದಾಖಲಿಸಿರುವ ಉದ್ದೇಶಗಳನ್ನು ಕರ್ನಾಟಕ ರಾಜ್ಯ ಹೆಣ್ಣು ಮಕ್ಕಳ ಕಾರ್ಯನೀತಿಯು ಅನುಮೋದಿಸುತ್ತದೆ ಮತ್ತು ಅದರ ಆಧಾರದ ಮೇಲೆ ಕರ್ನಾಟಕ ರಾಜ್ಯ ಹೆಣ್ಣು ಮಕ್ಕಳ ಕಾರ್ಯನೀತಿಯನ್ನು ರೂಪಿಸಲಾಗಿದೆ. ಹೆಣ್ಣು ಮಕ್ಕಳು ತಮ್ಮ ಬಾಲ್ಯಾವಸ್ಥೆಯಲ್ಲಿ ಎದುರಿಸುವ ತಾರತಮ್ಯಗಳನ್ನು ಮತ್ತು ಅವರು ಪ್ರೌಢಾವಸ್ಥೆಗೆ ಬಂದು ಮಹಿಳೆಯರಾಗುವ ಪ್ರಕ್ರಿಯೆಯಲ್ಲಿ ಪರಿಣಾಮ ಬೀರುವ ಸಂಗತಿಗಳ ಬಗ್ಗೆ ಇಲ್ಲಿ ಗಮನ ಸೆಳೆಯಲಾಗಿದೆ.

## ದೂರದರ್ಶಿತ್ವ

1.5. *ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಹೆಣ್ಣು ಮಗುವೂ ತಾರತಮ್ಯರಹಿತವಾದ ಮತ್ತು ದೌರ್ಜನ್ಯದಿಂದ ಮುಕ್ತವಾದ ವಾತಾವರಣದಲ್ಲಿ ಘನತೆಯಿಂದ ಜೀವಿಸುತ್ತದೆ. ಪ್ರತಿ ಹೆಣ್ಣು ಮಗುವಿನ ಜೀವಿಸುವ, ಅಭಿವೃದ್ಧಿ ಹೊಂದುವ, ಸುರಕ್ಷಿತವಾಗಿ ಬದುಕುವ ಮತ್ತು ಸಹಭಾಗಿತ್ವದ ಹಾಗೂ ಪಾಲುದಾರಿಕೆಯ ಹಕ್ಕುಗಳನ್ನು ಮಕ್ಕಳ ಬಾಲ್ಯಾವಸ್ಥೆಪೂರ್ಣ(0–18) ಸಂರಕ್ಷಿಸಲಾಗುತ್ತದೆ ಮತ್ತು ಈಡೇರಿಸಲಾಗುತ್ತದೆ.*

## ಕಾರ್ಯತಂತ್ರ

1.6. ಕರ್ನಾಟಕ ರಾಜ್ಯ ಹೆಣ್ಣು ಮಕ್ಕಳ ಕಾರ್ಯನೀತಿಯು ಘನತೆಯಿಂದ ಮತ್ತು ಸಮಾನತೆಯಿಂದ ಬದುಕುವ ಹಾಗೂ ಸುರಕ್ಷತೆ ಮತ್ತು ಸ್ವಾತಂತ್ರ್ಯಗಳನ್ನು ಅನುಭವಿಸುವ ಹೆಣ್ಣು ಮಕ್ಕಳ, ಅದರಲ್ಲೂ ಗಂಡಾಂತರ ಮತ್ತು ಅಪಾಯಗಳನ್ನು ಎದುರಿಸುವ ಹೆಣ್ಣು ಮಕ್ಕಳ ಎಲ್ಲ ಹಕ್ಕುಗಳನ್ನು ರಕ್ಷಿಸುತ್ತದೆ ಮತ್ತು ಈಡೇರಿಸಲಾಗುತ್ತದೆ. ಅದು ಪುನರುಚ್ಚರಿಸುವ ಮತ್ತೊಂದು ಸಂಗತಿಯೆಂದರೆ ತಾರತಮ್ಯ ಮತ್ತು ಪೂರ್ವಗ್ರಹಗಳಿಲ್ಲದ ರೀತಿಯಲ್ಲಿ ಅವರೆಲ್ಲ ಸಮಾನ ಅವಕಾಶಗಳನ್ನು ಮತ್ತು ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರಗಳಿಗೆ ಪ್ರವೇಶವನ್ನು ಹೊಂದಿರುತ್ತಾರೆ. ಹೆಣ್ಣು ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಮತ್ತು ಸಬಲೀಕರಣ ಹಕ್ಕುಗಳನ್ನು ಅನುಭವಿಸುವುದಕ್ಕೆ ತಡೆಯೊಡ್ಡುವ, ಅವುಗಳನ್ನು ಉಲ್ಲಂಘಿಸುವ ಅಥವಾ ಸಂಕುಚಿತಗೊಳಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳು, ರೂಢಿಗಳು ಮತ್ತು ನಂಬಿಕೆಗಳಿಗೆ ಅಥವಾ ಧಾರ್ಮಿಕ ಆಚರಣೆಗಳಿಗೆ ಅವಕಾಶ ನೀಡುವುದಿಲ್ಲ.

1.7. ಹೆಣ್ಣು ಮಕ್ಕಳ ಸ್ಥಿತಿಗತಿಯು ವಿಸ್ತೃತವಾಗಿ 'ಮಕ್ಕಳ ಮತ್ತು ಮಹಿಳೆಯ'ರ ಸಂಬಂಧದಲ್ಲಿ ಅಂತರ್ಗತಗೊಂಡಿರುತ್ತದೆ. ಆದ್ದರಿಂದ ಅವರ ಹಿತಾಸಕ್ತಿಗಳನ್ನು ಆದ್ಯತೆಯ ಮೇಲೆ ಪರಿಗಣಿಸಬೇಕು ಮತ್ತು ಹೆಣ್ಣು ಮಕ್ಕಳ ಅಭಿವೃದ್ಧಿ ಕುರಿತಂತೆ ಸರ್ಕಾರ ವಿಶೇಷ ಕ್ರಮ ತೆಗೆದುಕೊಳ್ಳುವುದು ಅಪೇಕ್ಷಣೀಯ.

1.8. ಈ ಕಾರ್ಯನೀತಿಯು ಹೆಣ್ಣು ಮಕ್ಕಳ ಮೇಲೆ ಪರಿಣಾಮ ಬೀರುವ ಕಾನೂನುಗಳಿಗೆ, ಕಾರ್ಯನೀತಿಗಳಿಗೆ, ಯೋಜನೆಗಳಿಗೆ, ಕಾರ್ಯಕ್ರಮಗಳಿಗೆ, ಸಂಪನ್ಮೂಲ ನಿಗದಿಪಡಿಸುವ ಕ್ರಮಗಳಿಗೆ ಮಾರ್ಗದರ್ಶನ ನೀಡುತ್ತದೆ ಮತ್ತು ಅವುಗಳಿಗೆ ಸಂಬಂಧಿಸಿದ ಮಾಹಿತಿ ನೀಡುತ್ತದೆ.

1.9.ಹೆಣ್ಣು ಮಕ್ಕಳ ಗರಿಷ್ಠ ಅಭಿವೃದ್ಧಿ ಮತ್ತು ಕ್ಷೇಮಾಭ್ಯುದಯವನ್ನು ಸಾಧಿಸಿಕೊಳ್ಳಲು ಪೂರಕವಾದ ಕಾನೂನು, ಕಾರ್ಯನೀತಿಗಳು, ಯೋಜನೆಗಳು, ಕಾರ್ಯಕ್ರಮಗಳು, ಆಯವ್ಯಯ, ಸಾಂಸ್ಥಿಕ ವ್ಯವಸ್ಥೆ, ಮೂಲಸೌಲಭ್ಯ ಹಾಗೂ ಮೇಲ್ವಿಚಾರಣೆ ವ್ಯವಸ್ಥೆ, ಸಾಮರ್ಥ್ಯ ನಿರ್ಮಾಣ ಮತ್ತು ಮಾಹಿತಿ ವ್ಯವಸ್ಥೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

## ಕರ್ನಾಟಕ ರಾಜ್ಯ ಹೆಣ್ಣು ಮಕ್ಕಳ ಕಾರ್ಯನೀತಿಯ ಉದ್ದೇಶಗಳು

1.10. ಈ ಕಾರ್ಯನೀತಿಯು ಕೆಳಕಂಡ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಶ್ರಮಿಸುತ್ತದೆ:

1.10.1. ರಾಜ್ಯಾದ್ಯಂತ ಲಿಂಗ ಆಯ್ಕೆಗೆ ಸಂಬಂಧಿಸಿದ ತಾರತಮ್ಯವನ್ನು ಮತ್ತು ಹೆಣ್ಣು ಮಕ್ಕಳ ಬಗೆಗಿನ ನಿರ್ಲಕ್ಷ್ಯವನ್ನು ತೊಡೆದು ಹಾಕಿ ಮಕ್ಕಳ ಲಿಂಗ ಅನುಪಾತ ಉತ್ತಮವಾಗುವಂತೆ ನೋಡಿಕೊಳ್ಳುವುದು;

1.10.2. ರೋಗನಿರೋಧಕ ಚಿಕಿತ್ಸೆ, ಪೌಷ್ಟಿಕತೆ ಮತ್ತು ಗುಣಮಟ್ಟದ ಶೈಶಾವಸ್ಥೆ ಸೇವೆಗಳು ಸಮಾನವಾಗಿ ಮತ್ತು ನ್ಯಾಯಯುತವಾಗಿ ಹೆಣ್ಣು ಮಕ್ಕಳಿಗೆ ದೊರೆಯುವಂತೆ ಮಾಡುವುದರ ಮೂಲಕ ಅವರ ಜೀವಿಸುವಿಕೆ, ಆರೋಗ್ಯಪೂರ್ಣ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಖಚಿತಪಡಿಸಲಾಗುತ್ತದೆ ಮತ್ತು ಕಾಯ್ದುಕೊಳ್ಳಲಾಗುತ್ತದೆ.

1.10.3. ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿದ ಸಮಾಜದ ಎಲ್ಲ ಹೆಣ್ಣು ಮಕ್ಕಳಿಗೂ ೧೮ ವಯೋಮಾನದವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಅಥವಾ ೧೨ನೆಯ ತರಗತಿಯನ್ನು ಪೂರ್ಣಗೊಳಿಸುವ ಅವಕಾಶವನ್ನು ಒದಗಿಸುವುದು ಮತ್ತು ಉನ್ನತ ಶಿಕ್ಷಣ ದೊರೆಯುವುದಕ್ಕೆ ಅಗತ್ಯವಾದ ಅವಕಾಶಗಳನ್ನು ಒದಗಿಸಲಾಗುತ್ತದೆ;

1.10.4. ಹೆಣ್ಣು ಮಕ್ಕಳನ್ನು ಸಶಕ್ತರನ್ನಾಗಿಸುವ, ಅವರ ಬದುಕಿನ ಗುಣಮಟ್ಟವನ್ನು ಉತ್ತಮಪಡಿಸುವಂತಹ ಹಾಗೂ ಅವರು ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತಹ ಮತ್ತು ಸ್ವಸಂಪೂರ್ಣತೆಯನ್ನು ಸಾಧಿಸಿಕೊಳ್ಳುವಂತಹ ಜೀವನ ಕುಶಲತೆ ಕ್ರಮಗಳನ್ನು ಒಳಗೊಂಡ ಶಿಕ್ಷಣವು ಅವರಿಗೆ ಕಡ್ಡಾಯವಾಗಿ ದೊರೆಯುವಂತೆ ಭರವಸೆ ನೀಡಲಾಗುತ್ತದೆ;

1.10.5 ತಮ್ಮ ಬದುಕಿನ ಮೇಲೆ ಪರಿಣಾಮ ಬೀರುವ ವಿಷಯಗಳಿಗೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಕ್ರಿಯಾಶೀಲವಾಗಿ ಸಹಭಾಗಿಗಳಾಗುವಂತೆ ಮತ್ತು ತಮ್ಮ ಬದುಕಿನ ಸ್ಥಿತಿಗತಿಯ ಮೇಲೆ ನಿಯಂತ್ರಣ ಸಾಧಿಸಿಕೊಳ್ಳುವಂತೆ ಹೆಣ್ಣು ಮಕ್ಕಳನ್ನು ಸಶಕ್ತರನ್ನಾಗಿಸುವುದು ಮತ್ತು ನಾಯಕತ್ವ, ರಾಜಕೀಯ ಪ್ರಾತಿನಿಧ್ಯ ಮತ್ತು ಆಡಳಿತ ಪರಿಪಾಲನೆಯಲ್ಲಿ ಚೈತನ್ಯಯುತವಾಗಿ ಅವರು ಪಾಲುಗೊಳ್ಳುವುದಕ್ಕೆ ಅಗತ್ಯವಾದ ಪೋಷಣೆ ನೀಡುವುದು;

1.10.6. ಶಾಸನಗಳನ್ನು ಮತ್ತು ಕಾರ್ಯನೀತಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರ ಮೂಲಕ ಹಿಂಸೆ, ದೌರ್ಜನ್ಯ ಮತ್ತು ತಾರತಮ್ಯಗಳಿಂದ ಹೆಣ್ಣು ಮಕ್ಕಳನ್ನು ಸಚಿರಕ್ಷಿಸಲಾಗುತ್ತದೆ;

1.10.7. ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಬಗ್ಗೆ ಕುಟುಂಬಗಳಲ್ಲಿ, ಸಮುದಾಯಗಳಲ್ಲಿ ಮತ್ತು ವಿಶಾಲವಾದ ಸಮಾಜದಲ್ಲಿ ಇರುವ ವರ್ತನೆ ಮತ್ತು ನಡವಳಿಕೆಗಳಲ್ಲಿ ಬದಲಾವಣೆ ತರುವುದರ ಮೂಲಕ ಸಂಪ್ರದಾಯ, ರೂಢಿಗಳು ಮತ್ತು ನಂಬಿಕೆಗಳು ಹಾಗೂ ಆಚರಣೆಗಳು ಲಿಂಗ ಸಂಬಂಧಗಳ ಬಗ್ಗೆ ಉಂಟುಮಾಡಿರುವ ರೂಢಿಗತ ಮತ್ತು ತಾರತಮ್ಯವಾದಿ ಧೋರಣೆಗಳನ್ನು ತೊಡೆದು ಹಾಕುವುದು;

1.10.8. ಆಡಳಿತದ ಎಲ್ಲ ಹಂತಗಳಲ್ಲಿ ಗಣಕ ಚಾಲಿತ ಮಕ್ಕಳ ದತ್ತಾಂಶ ಕೋಶಕ್ಕೆ ಸಂಬಂಧಿಸಿದ ಉಪಕರಣಗಳು, ವ್ಯವಸ್ಥೆ ಮತ್ತು ಪ್ರಕ್ರಿಯೆಯನ್ನು ಅಭಿವೃದ್ಧಿ ಪಡಿಸುವುದು ಮತ್ತು ದತ್ತಾಂಶವನ್ನು ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಸಂಬಂಧಿಸದಂತೆ ಪ್ರತ್ಯೇಕವಾಗಿ ವರ್ಗೀಕೃತ ರೀತಿಯಲ್ಲಿ ಸಿದ್ಧಪಡಿಸುವುದು ಹಾಗೂ ಅದನ್ನು ಕಾಲಕಾಲಕ್ಕೆ ಉತ್ತಮಪಡಿಸುವುದು.

## ಕಾರ್ಯನೀತಿಗೆ ಮಾರ್ಗದರ್ಶನ ನೀಡುವ ನಿಯಮಗಳು

1.11. ಹೆಣ್ಣು ಮಕ್ಕಳ ದೃಷ್ಟಿಕೋನದ ನೆಲೆಯಿಂದ ಈ ಕಾರ್ಯನೀತಿಯು ಅನುಮೋದಿಸುವ ಮತ್ತು ಪುನರುಚ್ಚರಿಸುವ ನಿಯಮಗಳು ಹೀಗಿವೆ:

- ಪ್ರತಿ ಹೆಣ್ಣು ಮಗುವನ್ನು ಹುಟ್ಟಿದ ದಿನದಿಂದ 18ನೆಯ ವಯಸ್ಸಿನವರೆಗೆ 'ಹೆಣ್ಣು' ಎಂದು ತಿಳಿಯುವುದು;
- ಪ್ರತಿ ಹೆಣ್ಣು ಮಗುವು ವಿಶಿಷ್ಟವಾದುದು ಮತ್ತು ಅದು ಅಮೂಲ್ಯ ಹಾಗೂ ಪರಮೋಚ್ಚ ರಾಷ್ಟ್ರೀಯ ಆಸ್ತಿ;
- ಎಲ್ಲ ಹೆಣ್ಣು ಮಕ್ಕಳು ಕೌಟುಂಬಿಕ ವಾತಾವರಣದಲ್ಲಿ ಬದುಕುವ ಮತ್ತು ಬೆಳೆಯುವ ಹಕ್ಕುಗಳನ್ನು ಪಡೆದಿದ್ದಾರೆ. ಅಂದರೆ ಹರ್ಷದಾಯಕ, ವಾತ್ಸಲ್ಯಪೂರ್ಣ ಹಾಗೂ ಹಿಂಸೆಯಿಂದ ಮುಕ್ತವಾದ ಕುಟುಂಬ ವಾತಾವರಣದಲ್ಲಿ ಬೆಳೆಯುವ ಹಕ್ಕು ಪಡೆದಿದ್ದಾರೆ;

- ಸಾಮಾಜಿಕ ತಾರತಮ್ಯಗಳ ಪರಿಣಾಮವಾಗಿ ಬಾಲ್ಯಾವಸ್ಥೆಯಲ್ಲಿ ಹೆಣ್ಣು ಮಕ್ಕಳು ನಿರ್ಲಕ್ಷ್ಯಕ್ಕೆ, ಅನನುಕೂಲಗಳಿಗೆ ಒಳಗಾಗುತ್ತಾರೆ ಮತ್ತು ವಾತ್ಸಲ್ಯದಿಂದ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ವಂಚಿತರಾಗುತ್ತಾರೆ;
- ಅದು ಸಾರ್ವಜನಿಕ ವಲಯವಾಗಿರಲಿ ಅಥವಾ ಖಾಸಗಿ ವಲಯವಾಗಿರಲಿ, ಹೆಣ್ಣು ಮಕ್ಕಳ ಮೇಲೆ ಪರಿಣಾಮ ಬೀರುವ ಕ್ರಮಗಳ ಮತ್ತು ನಿರ್ಣಯಗಳ ಪ್ರಾಥಮಿಕ ಕಾಳಜಿಯು ಅವರ ಪರಮೋಚ್ಛ ಹಿತಾಸಕ್ತಿಗಳನ್ನು ಕಾಯುವುದಾಗಿರಬೇಕು;
- ಸುರಕ್ಷತೆ ಮತ್ತು ಸುಭದ್ರತೆಯು ಹೆಣ್ಣು ಮಕ್ಕಳ ಕ್ಷೇಮಾಭ್ಯುದಯದ ಅಂತರ್ಗತ ಭಾಗವಾಗಿವೆ ಮತ್ತು ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿರುವ ಪೋಷಣೆ–ಪಾಲನಾ ಸಂಸ್ಥೆಗಳಲ್ಲಿ, ಶಾಲೆಗಳಲ್ಲಿ, ಆಸ್ಪತ್ರೆಗಳಲ್ಲಿ, ಶಿಶು ಪಾಲನಾ ಕೇಂದ್ರಗಳಲ್ಲಿ, ಕುಟುಂಬಗಳಲ್ಲಿ ಮತ್ತು ಸಮುದಾಯಗಳಲ್ಲಿ ಸಂಭವಿಸಬಹುದಾದ ಎಲ್ಲ ಬಗೆಯ ದೌರ್ಜನ್ಯ, ನಿರ್ಲಕ್ಷ್ಯ, ಹಿಂಸೆ, ಅಪೌಷ್ಟಿಕತೆ ಮತ್ತು ಶೋಷಣೆಗಳಿಂದ ಸಂರಕ್ಷಿಸುವುದು;
- ಹೆಣ್ಣು ಮಕ್ಕಳು ತಮ್ಮದೇ ವಿಚಾರಗಳನ್ನು ರೂಪಿಸಿಕೊಳ್ಳಲು ಸಶಕ್ತರಾಗಿದ್ದಾರೆ. ತಮ್ಮ ಬದುಕಿನ ಮೇಲೆ ಪರಿಣಾಮ ಬೀರುವ ಸಂಗತಿಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತ ಪಡಿಸಲು ಅಗತ್ಯವಾದ ಪೂರಕ ವಾತಾವರಣವನ್ನು ಮತ್ತು ಅವಕಾಶಗಳನ್ನು ಒದಗಿಸುವುದು;
- ಹೆಣ್ಣು ಮಕ್ಕಳ ವಿವಿಧ ಬಾಲ್ಯಾವಸ್ಥೆ ಕಾಲಘಟ್ಟಗಳನ್ನು ಗಮನದಲ್ಲಿಟ್ಟುಕೊಂಡು ಜೀವನಚಕ್ರ ವಿಧಾನದಲ್ಲಿ **ಸಂಗೋಪನಾ** ಸೇವೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಮಕ್ಕಳ ಸರ್ವಾಂಗೀಣ ಮತ್ತು ಸಮಗ್ರ ಬೆಳವಣಿಗೆ ಕ್ರಮಗಳು, ಸರ್ಕಾರ ಅನುಸರಿಸುವ ಕಾರ್ಯನೀತಿ ಮತ್ತು ಪೋಷಣಾ ಕ್ರಮಗಳನ್ನು ಮತ್ತಷ್ಟು ಪುಷ್ಟಿಗೊಳಿಸುವಂತಿರಬೇಕು.

**ಈ ಕಾರ್ಯನೀತಿಯಲ್ಲಿ ಅಳವಡಿಸಿಕೊಂಡಿರುವ ಸೈದ್ಧಾಂತಿಕ ದೃಷ್ಟಿಕೋನ**

1.12. ಈ ಕಾರ್ಯನೀತಿಯ ದೃಷ್ಟಿಕೋನವು ಒಳಗೊಳ್ಳುವ ಸಂಗತಿಗಳಾವುವೆಂದರೆ:

* ಮಕ್ಕಳ ವಿವಿಧ ವಯೋಮಾನ ಹಂತಗಳಲ್ಲಿ ಅವರ ಪಾಲನೆ, ಉಪಕ್ರಮಗಳು ಮತ್ತು ಸೇವೆಗಳನ್ನು ಒಳಗೊಳ್ಳುವಂತಹ ಸಮಗ್ರ ಮತ್ತು ಸರ್ವಾಂಗೀಣ ವಿಧಾನವನ್ನು ಅಳವಡಿಸಿಕೊಳ್ಳುವುದು ಮತ್ತು ಇದನ್ನು ಸೌಹಾರ್ದಯುತವಾಗಿ ಬೆಂಬಲಿಸುವ ಮತ್ತು ಪುನರ್ ಪ್ರತಿಪಾದಿಸುವ ವಿವಿಧ ಕಾರ್ಯನೀತಿಗಳ ಜೊತೆಯಲ್ಲಿ ಜೋಡಿಸುವುದು;
* ಹೆಣ್ಣು ಮಕ್ಕಳ ಸೌಹಾರ್ದಯುತ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಸರ್ಕಾರವು ದೀರ್ಘಾವಧಿ, ಸುಸ್ಥಿರಗತಿ, ಬಹುವಲಯ, ಸಮಗ್ರ ಮತ್ತು ಒಳಗೊಳ್ಳುವಿಕೆ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕು;
* ಲಿಂಗ ಸಂಬಂಧಿ ತಾರತಮ್ಯಗಳಿಗೆ ಕಾರಣವಾಗುವ ಮತ್ತು ಹೆಣ್ಣು ಮಕ್ಕಳು ಎದುರಿಸುವ ಗಂಡಾಂತರಗಳನ್ನು ಹಾಗೂ ಅನನುಕೂಲಗಳನ್ನು ತೊಡೆದು ಹಾಕಲು ಅಥವಾ ಕಡಿಮೆ ಮಾಡಲು ವಿಶೇಷ ಕ್ರಮಗಳನ್ನು ಮತ್ತು ಬಲಿಷ್ಠವಾದ ಸಾಮಾಜಿಕ ಸುರಕ್ಷತಾ ಜಾಲವನ್ನು ಮತ್ತು ಪೂರಕ ಬೆಂಬಲ ಕ್ರಮಗಳನ್ನು ಮತ್ತು ಗುಣಮಟ್ಟದ ಸೇವೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು;
* ಹೆಣ್ಣು ಮಕ್ಕಳ ಅಗತ್ಯಗಳು ಮತ್ತು ಅವರ ವಿಶೇಷ ಸ್ಥಿತಿಗತಿಗಳಿಗೆ ಪ್ರತಿಸ್ಪಂದಿಸುವಂತಹ ಶಾಸನಗಳನ್ನು ರೂಪಿಸುವುದು, ಅವುಗಳಿಗೆ ತಿದ್ದುಪಡಿ ತರುವುದು ಮತ್ತು ಅವುಗಳನ್ನು ಜಾರಿಗೊಳಿಸುವುದು;
* ಹೆಣ್ಣು ಮಕ್ಕಳ ಪಾಲನೆ ಮತ್ತು ಅಭಿವೃದ್ಧಿಗಳಿಗೆ ತಡೆಯೊಡ್ಡುವಂತಹ ಸಾಂಪ್ರದಾಯಿಕ ರೂಢಿಗಳು, ಮೂಢ ನಂಬಿಕೆಗಳು ಮತ್ತು ಆಚರಣೆಗಳು ಮತ್ತು ಲಿಂಗ ಸಮಾನತೆ ಹಾಗೂ ಲಿಂಗ ನ್ಯಾಯದ ಬಗ್ಗೆ ಅರಿವಿಲ್ಲದಂತಹ ಸಂಗತಿಗಳನ್ನು ಎದುರಿಸಲು ಕ್ರಮಗಳನ್ನು ತೆಗೆದುಕೊಳ್ಳುವುದು;
* ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದುಸ್ಥಿತಿಯಲ್ಲಿರುವ ಕುಟುಂಬಗಳ ಮತ್ತು ರಾಜ್ಯದಲ್ಲಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಇರುವ ಪ್ರಾದೇಶಿಕ ಅಸಮಾನತೆ ಸಮಸ್ಯೆಗಳನ್ನು ಎದುರಿಸಲು ಮತ್ತು ಅವುಗಳಿಗೆ ಪ್ರತಿಸ್ಪಂದಿಸಲು ಅಗತ್ಯವಾದ ಕ್ರಮಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ಅವುಗಳಿಗೆ ಆದ್ಯ ಗಮನ ನೀಡುವುದು. ಮಕ್ಕಳನ್ನು ಅನಾಥರನ್ನಾಗಿ ಮಾಡುವ, ಅವರ ಮಾರಾಟವನ್ನು, ಹೆಣ್ಣು ಭ್ರೂಣ ಹತ್ಯೆಯನ್ನು, ಬಾಲ್ಯ ವಿವಾಹಗಳನ್ನು ಹಾಗೂ ಬಾಲ ಕಾರ್ಮಿಕ ಸ್ಥಿತಿಯನ್ನು ತಡೆಯಲು ಸುರಕ್ಷತಾ ಜಾಲವನ್ನು ಒದಗಿಸುವುದು;

* ಹೆಣ್ಣು ಮಕ್ಕಳನ್ನು ಸಮಾಜದ ಮತ್ತು ಕುಟುಂಬದ ಆಸ್ತಿ ಎಂದು ಘನತೆಯಿಂದ ಪರಿಗಣಿಸುವ ವಾತಾವರಣವನ್ನು ರೂಪಿಸುವುದು ಮತ್ತು ಅದು ಸುಸ್ಥಿರಗತಿಯಲ್ಲಿ ಮುಂದುವರಿಸಿಕೊಂಡು ಹೋಗುವಂತೆ ಮಾಡುವುದು;

* ಸಕಾರಾತ್ಮಕ ಗುಣಗಳನ್ನು ಉತ್ತೇಜಿಸುವ ಮೂಲಕ ಹೆಣ್ಣು ಮಕ್ಕಳಲ್ಲಿ ಆತ್ಮಾಭಿಮಾನವನ್ನು ಮತ್ತು ಸ್ವಾವಲಂಬನೆಯನ್ನು ಉದ್ದೀಪನಗೊಳಿಸುವುದು ಮತ್ತು ಆ ಮೂಲಕ ಅವರನ್ನು ಸಶಕ್ತರನ್ನಾಗಿಸುವುದು;

* ಹೆಣ್ಣು ಮಕ್ಕಳ ಬಗ್ಗೆ, ಲಿಂಗ ಸಮಾನತೆಯ ಬಗ್ಗೆ ಮತ್ತು ಲಿಂಗ ಸಂಬಂಧಿ ನ್ಯಾಯದ ಬಗ್ಗೆ ಪುರುಷರು ಮತ್ತು ಬಾಲಕರ ವರ್ತನೆಯಲ್ಲಿ ಮತ್ತು ಮನೋಭಾವದಲ್ಲಿ ಸುಸ್ಥಿರಗತಿ ಬದಲಾವಣೆ ಉಂಟುಮಾಡುವಂತಹ ಕ್ರಿಯಾಶೀಲ ಕ್ರಮಗಳನ್ನು ತೆಗೆದುಕೊಳ್ಳಬೇಕು;

* ಹೆಣ್ಣು ಮಕ್ಕಳ ಅಭಿವೃದ್ಧಿ ಸಾಧ್ಯವಾಗಬಲ್ಲ ವಾತಾವರಣವನ್ನು ರೂಪಿಸಲು ಸರ್ಕಾರ, ವ್ಯಕ್ತಿಗಳು, ನಾಗರಿಕ ಸಮಾಜ ಮತ್ತು ಮಾಧ್ಯಮ ಹಾಗೂ ಮಹಿಳಾ ಗುಂಪುಗಳು ರಾಜ್ಯದಲ್ಲಿ ಸುಸ್ಥಿರಗತಿಯಲ್ಲಿ, ಸೌಹಾರ್ದಯುತವಾಗಿ, ಸಮಗ್ರವಾಗಿ ಮತ್ತು ನಿರಂತರವಾಗಿ ಶ್ರಮಿಸುತ್ತವೆ;

* ಸಾಕ್ಷಾಧಾರ ಮತ್ತು ಪುರಾವೆಗಳನ್ನು ಆಧರಿಸಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಸಮಾಲೋಚನಾ ಮತ್ತು ಆಪ್ತ ಸಲಹೆ ನೀಡಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವುದು;

* ಕ್ರಿಯಾಯೋಜನೆಯನ್ನು ಅಭಿವೃದ್ಧಿ ಪಡಿಸುವುದು ಮತ್ತು ಅನುಷ್ಠಾನಯೋಗ್ಯ ಮಾರ್ಗದರ್ಶಿ ಸೂತ್ರಗಳನ್ನು ಸಿದ್ದಪಡಿಸುವುದು.

**ಪ್ರಧಾನ ಆದ್ಯತೆಗಳು**

1.13 ರಾಜ್ಯದಲ್ಲಿನ ಪ್ರತಿಯೊಂದು ಹೆಣ್ಣು ಮಗುವಿನ ಜೀವರಕ್ಷಣೆಯ, ಆರೋಗ್ಯದ, ಪೌಷ್ಟಿಕತೆಯ, ಶುದ್ಧ ಮತ್ತು ಸುರಕ್ಷಿತ ವಾತಾವರಣದ, ಶಿಕ್ಷಣದ, ಅಭಿವೃದ್ಧಿಯ, ಸಂರಕ್ಷಣೆಯ ಮತ್ತು ಸಹಭಾಗಿತ್ವದ ಹಕ್ಕುಗಳು ಪ್ರಸ್ತುತ ಕಾರ್ಯನೀತಿಯ ಪ್ರಧಾನ ಆದ್ಯತೆಗಳಾಗಿವೆ.

1.14. ಹೆಣ್ಣು ಮಕ್ಕಳು ಹುಟ್ಟಿದಂದಿನಿಂದ 18 ನೆಯ ವಯೋಮಾನದವರೆಗೆ ಮತ್ತು 0–3, 3–6, 6–14 ಮತ್ತು 14–18 ವಯೋಮಾನಗಳಲ್ಲಿ ಜೀವಮಾನ ಆವರ್ತನ ದೃಷ್ಟಿಕೋನ ಆಧರಿಸಿ ಸಮಾನತೆ ನೆಲೆಯಲ್ಲಿ ಸರ್ವಾಂಗೀಣ ಮಕ್ಕಳ ಪಾಲನೆ–ಪೋಷಣೆ, ಅಭಿವೃದ್ಧಿ ಮತ್ತು ಸಂರಕ್ಷಣೆಗಳನ್ನು ಒದಗಿಸುವುದಕ್ಕೆ ಸರ್ಕಾರ ಬದ್ಧವಾಗಿದೆ.

## 2. ಜೀವರಕ್ಷಣೆ, ಆರೋಗ್ಯ ಮತ್ತು ಪೌಷ್ಟಿಕತೆ

2.1. ಹೆಣ್ಣು ಮಕ್ಕಳ ಪಾಲನೆ–ಪೋಷಣೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುವ ನೆಲೆಯಲ್ಲಿ ನಿರಂತರ ಸೇವಾ ಕ್ರಮವನ್ನು ಸರ್ಕಾರವು ಅನುಷ್ಠಾನಗೊಳಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ. ಎಲ್ಲ ಮಕ್ಕಳ, ಅದರಲ್ಲೂ ವಿಶೇಷವಾಗಿ ಹೆಚ್ಚು ಅನನುಕೂಲಗಳನ್ನು ಎದುರಿಸುವ ಹೆಣ್ಣು ಮಕ್ಕಳ ಜೀವರಕ್ಷಣೆ, ಆರೋಗ್ಯ ಮತ್ತು ಪೌಷ್ಟಿಕತೆಗಳನ್ನು ಒದಗಿಸಲು ಅಗತ್ಯವಾದ ಕಾರ್ಯತಂತ್ರಗಳನ್ನು ಸರ್ಕಾರವು ರೂಪಿಸುತ್ತದೆ. ವೈದ್ಯಕೀಯ ಸೇವೆ, ಪಾಲನೆ, ಪೌಷ್ಟಿಕತೆ ಸಂಗತಿಗಳು ಮತ್ತು ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೆಣ್ಣು ಮಕ್ಕಳು ಗಂಡು ಮಕ್ಕಳಿಗಿಂತ ಹೆಚ್ಚು ತಾರತಮ್ಯವನ್ನು ಎದುರಿಸುತ್ತಾರೆ. ಆದರೆ ಕೆಲಸ–ದುಡಿಮೆಗೆ ಸಂಬಂಧಿಸಿದಂತೆ ಅವರು ಹೆಚ್ಚು ಬಾರ ನಿರ್ವಹಿಸುತ್ತಿದ್ದಾರೆ. ಅಪ್ರಾಪ್ತ ವಯಸ್ಸಿಗೆ ಗರ್ಭಿಣಿರಾಗುವ ಅಥವಾ ಮತ್ತೆ ಮತ್ತೆ ಗರ್ಭಿಣಿಯರಾಗುವ ಹಾಗೂ ಮಕ್ಕಳ ಜನನದ ನಡುವೆ ಅಂತರ ಬಿಡದೆ ಇರುವುದರ ಕಾರಣಗಳಿಂದ ಮಹಿಳೆಯರು ಆರೋಗ್ಯ ಮತ್ತು ಜೀವರಕ್ಷಣೆಗೆ ಸಂಬಂಧಿಸಿದಂತೆ ಅಪಾಯಗಳನ್ನು ಎದುರಿಸುತ್ತಾರೆ. ಅವರಿಗೆ ಆರೋಗ್ಯ ಮತ್ತು ಪೌಷ್ಟಿಕತೆಯ ಬಗ್ಗೆ ಹೆಚ್ಚಿನ ತಿಳುವಳಿಕೆ ಇರುವುದಿಲ್ಲ. ಈ ವಿಷಯಗಳಿಗೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅವರಿಗೆ ಪಾತ್ರವಿರುವುದಿಲ್ಲ. ಆದ್ದರಿಂದ ಹೆಣ್ಣು ಮಕ್ಕಳ ಆರೋಗ್ಯ, ನೈರ್ಮಲ್ಯ, ಪೌಷ್ಟಿಕತೆ ಮತ್ತು ಪರಿಸರ ಸಂಬಂಧಿ ಪರಿಣಾಮಗಳಿಗೆ ಸಂಬಂಧಿಸಿದಂತೆ ಮತ್ತು ಕುಡಿಯುವ ನೀರು ಹಾಗೂ ಶೌಚಾಲಯ ಸೌಲಭ್ಯಗಳ ದೊರೆಯುವಿಕೆಗಳಿಗೆ ವಿಶೇಷ ಗಮನ ನೀಡುವ ಅಗತ್ಯವಿದೆ;

2.2. ಮಗು ಹುಟ್ಟಿದಾಗ ಎಷ್ಟು ತೂಕವಿರಬೇಕು ಎಂದು ನಿಗದಿಪಡಿಸಲಾಗಿದೆಯೋ(2.5 ಕೆ.ಜಿ.) ಅದಕ್ಕಿಂತ ಕಡಿಮೆ ತೂಕವಿರುವ ಮಕ್ಕಳು ನಮ್ಮ ಮುಂದಿರುವ ಒಂದು ಮುಖ್ಯ ಸಮಸ್ಯೆ. ರಾಜ್ಯಾದ್ಯಂತ ನವಜಾತ ಶಿಶುಗಳನ್ನು ಸಾಮಾನ್ಯವಾಗಿ ವ್ಯವಸ್ಥಿತವಾಗಿ ತೂಕ ಮಾಡದೆ ಇರುವುದರಿಂದ ಇದರ ಬಗ್ಗೆ ಎಲ್ಲ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಲಭ್ಯವಿಲ್ಲ;

2.3. ಎಲ್ಲ ವಯೋಮಾನದ ಹೆಣ್ಣು ಮಕ್ಕಳ ಪೌಷ್ಟಿಕತೆ ಮತ್ತು ಒಟ್ಟು ಆರೋಗ್ಯದ ಬಗ್ಗೆ ಗಮನ ನೀಡುವುದಕ್ಕಾಗಿ ಅವರಿಗೆ ಶಿಶುಪಾಲನ ಕೇಂದ್ರಗಳಲ್ಲಿ, ಅಂಗನವಾಡಿಗಳಲ್ಲಿ ಮತ್ತು ಜುವಿನೈಲ್ ಜಸ್ಟೀಸ್ ಸಂಸ್ಥೆಗಳಲ್ಲಿ ಒದಗಿಸುವ ಪೌಷ್ಟಿಕತೆ ಮತ್ತು ಪೂರಕ ಆಹಾರ ಕುರಿತಂತೆ ಮೇಲ್ವಿಚಾರಣೆ ನಡೆಸುವುದು ಅಪೇಕ್ಷಣೀಯ.

**0–3 ವಯೋಮಾನದ ಮಕ್ಕಳು**

2.4. ಈ ಕಾರ್ಯನೀತಿಯು ಆರಂಭಿಕ ಬಾಲ್ಯಾವಸ್ಥೆ ಮತ್ತು ಮಕ್ಕಳ ಶಿಕ್ಷಣ ಕಾಯದೆಯ ಎಲ್ಲ ಕ್ರಮಗಳನ್ನು ಒಳಗೊಳ್ಳುತ್ತದೆ. ಅದರ ಪ್ರಕಾರ ಆರು ವರ್ಷಕ್ಕಿಂತ ಕಡಿಮೆ ವಯೋಮಾನದ ಎಲ್ಲ ಮಕ್ಕಳಿಗೆ ಅಂಗನವಾಡಿ ಮತ್ತು ಎಲ್ಲಿ ಅಗತ್ಯವಿದೆಯೋ ಅಲ್ಲಿ ಶಿಶುಪಾಲನ ಕೇಂದ್ರಗಳನ್ನು ಒದಗಿಸಬೇಕಾಗುತ್ತದೆ. ಈ ಕ್ರಮಗಳು ಜೀವರಕ್ಷಣೆ, ಆರೋಗ್ಯ, ಪೌಷ್ಟಿಕತೆ, ಪಾಲನೆ, ಸಂರಕ್ಷಣೆ, ವಯೋಮಾನಕ್ಕೆ ಅನುಗುಣವಾದ ಆಟೋಟ ರೂಪದಲ್ಲಿ ಕಲಿಕೆ ಮತ್ತು ಪಾಲಕರಿಗೆ ಸಂಬಂಧಿಸಿದ ಕುಶಲತೆ ಮತ್ತು ತರಬೇತಿ ಮುಂತಾದವುಗಳನ್ನು ಒಳಗೊಳ್ಳಬೇಕು. ಮಗುವಿನ ಶೈಶಾವಸ್ಥೆಯ ಎರಡನೆಯ ಮತ್ತು ಮೂರನೆಯ ವಯಸ್ಸಿನಲ್ಲಿ ಅಂಗನವಾಡಿಗಳು ಮತ್ತು ಆರೋಗ್ಯ ಕೇಂದ್ರಗಳು ಸೇವೆಯನ್ನು ಒದಗಿಸಬೇಕು. ಅದರ ನಂತರ ಅದು ಕೇಂದ್ರ ಆಧರಿತವಾಗಿರುತ್ತದೆ.

ಈ ಬಗ್ಗೆ ಸರ್ಕಾರವು ತೆಗೆದುಕೊಳ್ಳಬೇಕಾದ ಕ್ರಮಗಳೆಂದರೆ:

2.5. ನೊಂದಣಿ ಕೇಂದ್ರಗಳಿಗೆ ಸಂಪರ್ಕವನ್ನು ಸರಳವನ್ನಾಗಿ ಮಾಡಿ ಮತ್ತು ನೊಂದಣಿ ಕ್ರಮಗಳನ್ನು ಸರಳೀಕೃತ ಮಾಡಿ ರಾಜ್ಯದಲ್ಲಿ ಮಕ್ಕಳ ಜನನ, ಮರಣ ಮತ್ತು ಮದುವೆಗಳ ನೊಂದಣಿ ವ್ಯವಸ್ಥೆಯನ್ನು ಉತ್ತಮ ಪಡಿಸಬೇಕು;

2.6. ಗರ್ಭಧಾರಣೆ–ಪೂರ್ವ, ಪ್ರಸವ–ಪೂರ್ವ ಚಿಕಿತ್ಸಾ ತಂತ್ರಗಳ ಕಾಯಿದೆಯಲ್ಲಿರುವ ಲೋಪಗಳನ್ನು ಸರಿಪಡಿಸಲು ಸದರಿ ಕಾಯಿದೆಯನ್ನು ಕಾಲಕಾಲಕ್ಕೆ ಪರಿಷ್ಕರಿಸಬೇಕು ಮತ್ತು ಅದರ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಜಾರಿ ಕ್ರಮಗಳ ವ್ಯವಸ್ಥೆಯನ್ನು ಬಲಪಡಿಸಬೇಕು;

2.7. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಸೇವೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಮಧ್ಯಪ್ರವೇಶಿಕೆ ಕ್ರಮಗಳನ್ನು ಬಲಪಡಿಸಬೇಕು. ನವಜಾತ ಮತ್ತು ಬಾಲ್ಯಾವಸ್ಥೆ ರೋಗಗಳ ನಿರ್ವಹಣಾ ಕಾಯಿದೆಯಲ್ಲಿ ನವೀನ ಮಾರ್ಗದರ್ಶನ ಸೂತ್ರಗಳ ಪ್ರಕಾರ ಕುಟುಂಬ, ಸಮುದಾಯ ಮತ್ತು ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ ಸೇವೆಯ ಕ್ರಮಗಳನ್ನು ಉತ್ತಮ ಪಡಿಸುವುದು;

2.8. ಹುಟ್ಟಿದ ಮಗುವಿನ ಮೊದಲ 1000 ದಿನಗಳು(ಗರ್ಭಾವಸ್ಥೆಯಿಂದ ಎರಡನೆಯ ವಯಸ್ಸಿನವರೆಗೆ) ಅವರ ಆರೋಗ್ಯಪೂರ್ಣ ಬೆಳವಣಿಗೆ ಮತ್ತು ಬೌದ್ಧಿಕ ಸಾಮರ್ಥ್ಯದ ಬೆಳವಣಿಗೆ ದೃಷ್ಟಿಯಿಂದ ನಿರ್ಣಾಯಕವಾಗಿವೆ. ಆದ್ದರಿಂದ ಆ ಸಂದರ್ಭದಲ್ಲಿ ಗರ್ಭಾವಸ್ಥೆಯಲ್ಲಿ ಉಂಟಾಗುವ ರೋಗಗಳು ಮತ್ತು ಅಪೌಷ್ಟಿಕತೆಗಳ ನಿವಾರಣೆಗೆ ಕಾರ್ಯತಂತ್ರಗಳನ್ನು ರೂಪಿಸಬೇಕು. ಗರ್ಭಿಣಿ ಮಹಿಳೆಯರನ್ನು ಮೊಲೆಯುಣಿಸುವುದಕ್ಕೆ ಸಿದ್ದಪಡಿಸುವುದಕ್ಕಾಗಿ ಆಪ್ತ ಸಮಾಲೋಚನೆ ಮತ್ತು ಪೋಷಕ ಕ್ರಮಗಳನ್ನು ಬಲಪಡಿಸುವುದು, ಹೆರಿಗೆ ಸಂದರ್ಭದಲ್ಲಿ ತಾಯಿ ಮತ್ತು ಮಗುವಿಗೆ ಅಗತ್ಯವಾದ ಪಾಲನೆ–ಪೋಷಣೆ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಮೊಲೆಯುಣಿಸುವುದರಲ್ಲಿ ತಾಯಂದಿರು ಹೆಣ್ಣು ಮಕ್ಕಳಿಗೆ ಯಾವುದೇ ತಾರತಮ್ಯ ಮಾಡದಂತೆ ನೋಡಿಕೊಳ್ಳುವುದು;

2.9. ಗರ್ಭಾವಸ್ಥೆಯಿಂದ 18ನೆಯ ವಯೋಮಾನದವರೆಗೆ ಗರ್ಭಿಣಿಯರಿಗೆ ಸಂಬಂಧಿಸಿದಂತೆ ಪ್ರಸವಪೂರ್ವ ಸೇವೆ, ಹೆರಿಗೆ, ಪ್ರಸವ ನಂತರದ ಸೇವೆ, ರೋಗನಿರೋಧಕ ಚುಚ್ಚುಮದ್ದು, ಆರಂಭಿಕ ಬಾಲ್ಯಾವಸ್ಥೆ ಮತ್ತು ಮಕ್ಕಳ ಶಿಕ್ಷಣ ಕಾಯಿದೆ ಕೇಂದ್ರಗಳಲ್ಲಿ ದಾಖಲಾತಿ, ಅಂಗನವಾಡಿಯಲ್ಲಿನ ದಾಖಲಾತಿ, ಶಾಲಾ ದಾಖಲಾತಿ, ವೃತ್ತಿ ಪರ ಶಿಕ್ಷಣ ತರಬೇತಿ ಮುಂತಾದವುಗಳನ್ನು ಒದಗಿಸುವದರ ಬಗ್ಗೆ ಕಾರ್ಡ್‌ನ್ನು ಸಿದ್ದಪಡಿಸಿ ಬಳಸುವುದು.

**3-6 ವಯೋಮಾನದ ಮಕ್ಕಳು**

ಮೇಲೆ ಹೇಳಿರುವ ಕ್ರಮಗಳಿಗೆ ಪೂರಕವಾಗಿ ಕೆಳಕಂಡ ಹೆಚ್ಚುವರಿ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳಬೇಕಾಗುತ್ತದೆ:

2.10. ಹೆಣ್ಣು ಮಕ್ಕಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ರೋಗನಿರೋಧಕ ಚುಚ್ಚುಮದ್ದು ಕಾರ್ಯಕ್ರಮವನ್ನು ಬಲಪಡಿಸುವುದರ ಮೂಲಕ ಅದನ್ನು ಸಾರ್ವತ್ರಿಕಗೊಳಿಸುವುದು. ಬಾಲ್ಯಾವಸ್ಥೆಗೆ ಸಾಮಾನ್ಯವಾದ ಮತ್ತು ಅತಿಸಾರಕ್ಕೆ ಸಂಬಂಧಿಸಿದ ರೋಗಗಳಿಗೆ ಚಿಕಿತ್ಸೆ ಮತ್ತು ಆರೋಗ್ಯ ಸೇವೆ ಎಲ್ಲ ಮಕ್ಕಳಿಗೂ ದೊರೆಯುವಂತೆ ನೋಡಿಕೊಳ್ಳುವುದು ಹಾಗೂ ಮುಂಚೂಣಿಯಲ್ಲಿರುವ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಆಪ್ತ ಸಲಹೆ ಮತ್ತು ಮಾರ್ಗದರ್ಶನ ನೀಡುವುದು;

2.11. ಅಂಗನವಾಡಿಗಳ ಮೂಲಕ ನೀಡುವ ಪೂರಕ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮವನ್ನು ಗರ್ಭಿಣಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ವಿಶೇಷ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಪರಾಮರ್ಶಿಸುವುದು ಮತ್ತು ಬಲಪಡಿಸುವುದು. ಕಾಲಕಾಲಕ್ಕೆ ಮಕ್ಕಳು ಜಂತುಹುಳುಗಳ ಸೋಂಕಿನಿಂದ ಮುಕ್ತವಾಗುವಂತೆ ಮಾಡುವುದು,

ಅನಿಮಿಯಾದ ಸೂಚನೆಗಳನ್ನು ತಪಾಸಣೆ ಮೂಲಕ ಆರಂಭದಲ್ಲಿಯೇ ಗುರುತಿಸುವುದು ಮತ್ತು ಅವುಗಳ ನಿವಾರಣೆಗೆ ಕಬ್ಬಿಣದ ಮಾತ್ರೆ ಹಾಗೂ 'ಎ' ಅನ್ನಾಂಗ ಮಾತ್ರೆಗಳನ್ನು ನೀಡುವುದು;

2.12. ಹೆಣ್ಣು ಮಕ್ಕಳ ಬೆಳವಣಿಗೆ ಪರಿಶೀಲನೆಗೆ ಚಾರ್ಟ್ ರೂಪಿಸಿ ಅದನ್ನು ವ್ಯವಸ್ಥಿತವಾಗಿ ಬಳಸುವುದು ಮತ್ತು ಅದಕ್ಕೆ ಸಂಬಂಧಿಸಿದ ಅನುಪಾಲನಾ ಕ್ರಮಗಳನ್ನು ತೆಗೆದುಕೊಳ್ಳುವುದು;

2.13. ಆರೋಗ್ಯ ಸಹಾಯಕಿಯರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಪಾಲಕರಿಗೆ ಆಪ್ತ ಸಲಹೆ ನೀಡಿ, ಸಮಾಲೋಚನೆ ನಡೆಸಿ ಹೆಣ್ಣು ಮಕ್ಕಳನ್ನು ಅಂಗನವಾಡಿಗೆ ಸೇರಿಸುವಂತೆ ಪ್ರೇರಣೆ ನೀಡುವುದು ಹಾಗೂ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ನಡೆಸುವಂತೆ ಮಾಡುವುದು;

2.14. ಸಮಗ್ರ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ ಮತ್ತು ಆರಂಭಿಕ ಬಾಲ್ಯಾವಸ್ಥೆ ಮತ್ತು ಮಕ್ಕಳ ಶಿಕ್ಷಣ ಕಾಯಿದೆಗಳ ಪುನಾರಚನೆ ಭಾಗವಾಗಿ ಬಾಲ್ಯದಲ್ಲಿಯೇ ವಿಕಲ ಚೇತನ ಸಮಸ್ಯೆಗಳನ್ನು ಪ.ಜಾ, ಪ.ಪಂ, ಅಲ್ಪಸಂಖ್ಯಾತರು ಹಾಗೂ ಸಾಮಾಜಿಕವಾಗಿ ದುರ್ಬಲ ವರ್ಗದ ಗುಂಪುಗಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಗುರುತಿಸುವುದು.

<u>ಆರರಿಂದ ಹದಿನಾಲ್ಕನೆಯ ವಯೋಮಾನದ ಮಕ್ಕಳು</u>

2.15. ಶಾಲಾ ಆರೋಗ್ಯ ಕಾರ್ಯಕ್ರಮವನ್ನು ವಿಸ್ತೃತಗೊಳಿಸುವುದು ಮತ್ತು ನಿಯಮಿತ ಶಾಲಾ ಆರೋಗ್ಯ ತಪಾಸಣೆ ಕಾರ್ಯಕ್ರಮದಲ್ಲಿ ಪಾಲಕರನ್ನು ಒಳಗೊಳ್ಳುವಂತೆ ಆಪ್ತ ಸಲಹೆ ನೀಡುವುದು ಹಾಗೂ ಹೆಣ್ಣು ಮಕ್ಕಳಲ್ಲಿ ಆರೋಗ್ಯಕರ ಆಹಾರದ ಅಭ್ಯಾಸವನ್ನು ಬೆಳೆಸುವಂತೆ ಮಾಡುವುದು. ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಕುಟುಂಬಗಳಲ್ಲಿ ಕಬ್ಬಿಣದ ಅಂಶವಿರುವ ಆಹಾರ ಸೇವನೆಗೆ ಒತ್ತು ನೀಡುವುದು, ಜಂತುಹುಳುಗಳ ನಿವಾರಣೆಗೆ ಔಷಧಿ ನೀಡುವುದು, ಕಬ್ಬಿಣದ ಮತ್ತು ಫೋಲಿಕ್ ಪೂರಕ ಮಾತ್ರೆಗಳನ್ನು ನಿಯಮಿತವಾಗಿ ಪ್ರತಿ ವಾರ ನೀಡುವುದು;

2.16. ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಹದಿಹರೆಯದ ಹೆಣ್ಣು ಮಕ್ಕಳು ಅನಿಮಿಯಾ ಎದುರಿಸುತ್ತಿದ್ದರೆ ಅವರಿಗೆ ಪೌಷ್ಟಿಕತೆಯ ಬಗ್ಗೆ ಆಪ್ತ ಸಲಹೆ–ಸಮಾಲೋಚನೆ ಸೇವೆ ಒದಗಿಸುವುದು. ಈ ಬಗೆಯ ಸಮಸ್ಯೆಗಳನ್ನು ನಿರ್ವಹಿಸಲು ಶಿಕ್ಷಕರಿಗೆ ಮತ್ತು ಮುಂಚೂಣಿಯಲ್ಲಿರುವ ಕಾರ್ಯಕರ್ತರ ಜ್ಞಾನ ಮತ್ತು ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವುದು;

2.17. ಮಕ್ಕಳ, ಅದರಲ್ಲೂ ಹೆಣ್ಣು ಮಕ್ಕಳಲ್ಲಿನ ವಿಕಲ ಚೇತನದ ಸಮಸ್ಯೆಯನ್ನು ಆರಂಭದಲ್ಲಿಯೇ ಗುರುತಿಸುವುದು ಮತ್ತು ಕ್ರಮ ತೆಗೆದುಕೊಳ್ಳುವುದು. ವಿಕಲ ಚೇತನ ಸಮಸ್ಯೆಗಳನ್ನು ಗುರುತಿಸುವುದು, ಮೌಲ್ಯ ಮಾಪನ ಮಾಡುವುದು, ಚಿಕಿತ್ಸಾ ಕ್ರಮಗಳನ್ನು ಆಯ್ದುಕೊಳ್ಳುವುದು ಮತ್ತು ಪುನರ್ವಸತಿ ಒದಗಿಸುವುದು. ವಿವಿಧ ಬಗೆಯ ವಿಕಲ ಚೇತನ ಸಮಸ್ಯೆಗಳ ನಿರ್ವಹಣೆಗೆ ಅಗತ್ಯವಾದ ತರಬೇತಿಯನ್ನು ಆರೋಗ್ಯ ಕಾರ್ಯಕರ್ತರಿಗೆ ನೀಡುವುದು. ವಿಕಲ ಚೇತನದ ಬಗ್ಗೆ ಇರುವ ಮೂಢ ನಂಬಿಕೆಗಳನ್ನು ಮತ್ತು ಅದನ್ನು ಕಳಂಕವೆಂದು ಪರಿಗಣಿಸುವ ಮನೋಭಾವವನ್ನು ತೊಡೆದು ಹಾಕಲು ಆರೋಗ್ಯ ಸೇವಾಕರ್ತರಿಗೆ ಆಪ್ತ ಸಲಹೆ ನೀಡುವ ಮತ್ತು ಅಂತಹ ಸಮಸ್ಯೆಗಳನ್ನು ನಿರ್ವಹಿಸಲು ಅಗತ್ಯವಾದ ಕುಶಲತೆ ತರಬೇತಿ ನೀಡುವುದು;

2.18. ಹೆಣ್ಣು ಮಕ್ಕಳು ಉತ್ತಮ ಆರೋಗ್ಯದ ಲಾಭ ಪಡೆದುಕೊಳ್ಳಲು ಅಗತ್ಯವಾದ ಶಾಲೆಗಳಲ್ಲಿ ಮತ್ತು ಮನೆಗಳಲ್ಲಿ ಶೌಚಾಲಯ ಸೌಲಭ್ಯ, ಶುದ್ಧ ಕುಡಿಯುವ ನೀರು ಮತ್ತು ವೈಯುಕ್ತಿಕ ನೈರ್ಮಲ್ಯ ಮುಂತಾದವುಗಳ ಅಭ್ಯಾಸ ಮತ್ತು ಅವುಗಳ ಬಗೆಗಿನ ಅರಿವನ್ನು ಸಾರ್ವತ್ರಿಕಗೊಳಿಸುವುದು;

2.19. ಹೆಣ್ಣು ಮಕ್ಕಳಿಗೆ ಮತ್ತು ಅವರ ಕುಟುಂಬಗಳಿಗೆ ಮಾಸಿಕ ಋತುಚಕ್ರಕ್ಕೆ ಸಂಬಂಧಿಸಿದ ನೈರ್ಮಲ್ಯದ ಮಹತ್ವದ ಬಗ್ಗೆ ಶಿಕ್ಷಣ ನೀಡುವುದು ಮತ್ತು ಸುರಕ್ಷಿತ ಮತ್ತು ನೈರ್ಮಲ್ಯ ಅಭ್ಯಾಸಗಳಿಗೆ ಅಗತ್ಯವಾದ ಸಂಪನ್ಮೂಲಗಳನ್ನು ಸಮುದಾಯಗಳು ತಮ್ಮಲ್ಲಿಯೇ ರೂಢಿಸಿಕೊಳ್ಳುವಂತೆ ಮಾಡುವುದು.

**ಹದಿನಾಲ್ಕರಿಂದ ಹದಿನೆಂಟನೆಯ ವಯೋಮಾನದವರೆಗೆ**

**2.20**. ಹದಹರೆಯದ ಬಾಲಕರಿಗೆ ಮತ್ತು ಬಾಲಕಿಯರಿಗೆ ಜೀವನಕೌಶಲ್ಯದ ಬಗ್ಗೆ ಆಪ್ತ ಸಲಹೆ ಸಮಾಲೋಚನೆ ಒದಗಿಸುವುದು, ಶಾಲಾ ಪಠ್ಯಕ್ರಮದಲ್ಲಿ ಸಂತಾನೋತ್ಪತ್ತಿ ಮತ್ತು ಲೈಂಗಿಕ ಶಿಕ್ಷಣವನ್ನು ಅಳವಡಿಸುವುದು, ಲೈಂಗಿಕ ಸಂಪರ್ಕದ ಮೂಲಕ ಹರಡುವ ರೋಗಗಳ ಬಗ್ಗೆ, ಎಚ್‌ಐವಿ/ಏಡ್ಸ್ ಬಗ್ಗೆ ಮಾಹಿತಿ ಮತ್ತು ಸೇವೆಯ ವಿವರ ನೀಡುವುದು. ಸಮುದಾಯದಲ್ಲಿ ಅಂತಹ ರೋಗಕ್ಕೆ ತುತ್ತಾದ ಹೆಣ್ಣು ಮಕ್ಕಳ ಬಗ್ಗೆ ತಾರತಮ್ಯ ಮಾಡದಂತೆ ಮತ್ತು ಅವರನ್ನು ಕಳಂಕಿತರೆಂದು ಕರೆಯುವುದರ ವಿರುದ್ಧ ಜಾಗೃತಿ ಆಂದೋಳನ ನಡೆಸುವುದು;

**2.21**. ಶೈಶಾವಸ್ಥೆಯಿಂದ ಹದಿಹರೆಯದ ವಯೋಮಾನದ ತನಕ ಬಾಲಕಿಯರನ್ನು ಸದೃಢ ಆರೋಗ್ಯವಂತರನ್ನಾಗಿ ಬೆಳೆಸುವುದಕ್ಕೆ, ಅವರ ಜೀವರಕ್ಷಣೆಗೆ ಮತ್ತು ಅವರ ಆರೋಗ್ಯ ಕಾಪಾಡಲು ಮೊದಲನೆಯ ಬಾರಿಗೆ ಗರ್ಭಿಣಿಯರಾಗುವ ಸಂದರ್ಭದಲ್ಲಿಯೇ ಅವರಿಗೆ ಉತ್ತಮ ಪೌಷ್ಟಿಕ ಆಹಾರ ನೀಡುವುದರ ಮೂಲಕ ಮತ್ತು ಆರೋಗ್ಯ ಸೇವೆ ಒದಗಿಸುವುದರ ಮೂಲಕ ಅವರು ಎದುರಿಸುವ ಅನಿಮಿಯವನ್ನು ತೊಲಗಿಸಬಹುದು;

2.22. ಶಾಲಾ ಆರೋಗ್ಯ ಕಾರ್ಯಕ್ರಮದ ವ್ಯಾಪ್ತಿಯಿಂದ ಹೊರಗಿರುವ ಶಾಲೆಗಳನ್ನು ಮತ್ತು ಮಧ್ಯದಲ್ಲಿ ಶಾಲೆ ಬಿಟ್ಟಿರುವ ಹೆಣ್ಣು ಮಕ್ಕಳನ್ನು ಸೇರಿಸಿಕೊಂಡು 'ಸಬಲ' ಕಾರ್ಯಕ್ರಮವನ್ನು ವಿಸ್ತೃತಗೊಳಿಸಬೇಕು ಮತ್ತು ಅದರ ಅನುಷ್ಠಾನವನ್ನು ಸಶಕ್ತಗೊಳಿಸಬೇಕು. ಹದಿಹರೆಯದ ಯುವತಿಯರಲ್ಲಿನ ಅನಿಮಿಯಾ ಮತ್ತು ಬಾಡಿ ಮಾಸ್ ಇಂಡೆಕ್ಸ್ ಕುರಿತಂತೆ ಮೇಲ್ವಿಚಾರಣೆ ನಡೆಸಲು ಕಿಶೋರಿ ಕಾರ್ಡ್‌ಗಳನ್ನು ಬಳಸುವುದು;

2.23. ಗರ್ಭಿಣಿರಾಗಿರುವ ಹದಿಹರೆಯದ ಹೆಣ್ಣು ಮಕ್ಕಳ ಆರೋಗ್ಯ ತಪಾಸಣೆ ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು, ಅವರಿಗೆ ಪೂರಕ ಪೌಷ್ಟಿಕ ಅಹಾರ ಒದಗಿಸುವುದು, ಗರ್ಭಿಣಿ ಮಹಿಳೆಯರಿಗೆ ಮತ್ತು ಮೊಲೆಯುಣಿಸುತ್ತಿರುವ ತಾಯಂದಿರಿಗೆ ಆಪ್ತ ಸಲಹೆ ಸಮಾಲೋಚನೆ ಒದಗಿಸುವುದು ಹಾಗೂ ಹೆರಿಗೆಗೆ ನೆರವು ನೀಡುವುದು ಮತ್ತು ಪಾಲಕತನದ ಕುಶಲತೆ ಬಗ್ಗೆ ಮಾಹಿತಿ ನೀಡುವುದು;

2.24. ಉನ್ನತ ಆಸ್ಪತ್ರೆಗಳ ಮೂಲಕ ಹೆಣ್ಣು ಮಕ್ಕಳ ಮಾನಸಿಕ ಆರೋಗ್ಯದ ಅಗತ್ಯಗಳನ್ನು ಪೂರೈಸುವುದು, ಪಾಲಕರಿಗೆ ಮತ್ತು ಸಮುದಾಯಕ್ಕೆ ಮಾನಸಿಕ ಆರೋಗ್ಯಕ್ಕೆ ಸಂಬಂಧಸಿದಂತೆ ಇರುವ ಮೂಢ ನಂಬಿಕೆಗಳನ್ನು ಮತ್ತು ಅದನ್ನು ಕಳಂಕ ಅನ್ನುವಂತೆ ನೋಡುವ ಕ್ರಮವನ್ನು ತೊಲಗಿಸುವುದು ಮತ್ತು ಅದಕ್ಕೆ ತುತ್ತಾದ ಮಕ್ಕಳಿಗೆ ಸೂಕ್ತ ಚಿಕಿತ್ಸೆ ದೊರೆಯುವಂತೆ ಮಾಡುವುದು.

## 3. ಶಿಕ್ಷಣ ಮತ್ತು ಅಭಿವೃದ್ಧಿ

3.1. ರಾಷ್ಟ್ರೀಯ ಆರಂಭಿಕ ಬಾಲ್ಯಾವಸ್ಥೆ ಮತ್ತು ಮಕ್ಕಳ ಶಿಕ್ಷಣ ಕಾಯಿದೆ ಪ್ರಕಾರ ಕಲಿಕೆಯು ಮಗು ಹುಟ್ಟಿದ ಸಂದರ್ಭದಿಂದಲೆ ಅರಂಭವಾಗುತ್ತದೆ. ಪ್ರಥಮ ಹಂತದಲ್ಲಿ ಮಕ್ಕಳ ಶೈಶಾವಸ್ಥೆಯ ಗುಣಮಟ್ಟದ ಸೇವೆಗೆ ಸಂಬಂಧಿಸಿದಂತೆ ಸಂಪನ್ಮೂಲವನ್ನು ವಿನಿಯೋಗಿಸುವುದಕ್ಕೆ ಅದು ಒತ್ತಾಯಿಸುತ್ತದೆ. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯನ್ನು ಉತ್ತಮ ಪಡಿಸುವುದಕ್ಕೆ ಮತ್ತು ತನ್ನ ಶೈಕ್ಷಣಿಕ ಸಂಭಾವ್ಯ ಸಾಮರ್ಥ್ಯವನ್ನು ಸಾಧಿಸಿಕೊಳ್ಳುವುದಕ್ಕೆ ಮತ್ತು ಪಾಲಕರ ಮಟ್ಟದಲ್ಲಿ ಆರು ವರ್ಷಕ್ಕಿಂತ ಕಡಿಮೆಯಿರುವ ಮಕ್ಕಳ ಸಂಗೋಪನಾ ಸೇವೆಯನ್ನು ಬಲಪಡಿಸುವುದಕ್ಕೆ ಇವು ಅಗತ್ಯ. ಸಮಗ್ರ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮದ ಸಾರ್ವತ್ರೀಕರಣದಿಂದಾಗಿ ಸರ್ಕಾರವು ರಾಜ್ಯಾದ್ಯಂತ ಎಲ್ಲ ಮಕ್ಕಳ ಬೌದ್ಧಿಕ ಪ್ರೇರಣೆಯನ್ನು ಒಳಗೊಂಡ ಸಮಗ್ರ ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸುವ ಸ್ಥಿತಿಯಲ್ಲಿದೆ. ರಾಜ್ಯದಲ್ಲಿ 6–14 ವಯೋಮಾನದ ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ದಿಶೆಯಲ್ಲಿ ಜಾರಿಗೊಳಿಸಿರುವ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು 2009 ಕಾಯಿದೆಯು ಒಂದು ಮೈಲಿಗಲ್ಲಾಗಿದೆ. ಎಲ್ಲ ಮಕ್ಕಳು ಶಾಲೆಗೆ ದಾಖಲಾಗುವಂತೆ ಮತ್ತು ಶಾಲೆಯಲ್ಲಿ ಶಿಕ್ಷಣವನ್ನು ಮುಂದುವರಿಸುವಂತೆ ಮಾಡುವ ದಿಶೆಯಲ್ಲಿ ಕರ್ನಾಟಕ ಸರ್ಕಾರವು ಅನೇಕ ಕ್ರಿಯಾಶೀಲ ಕ್ರಮಗಳನ್ನು ತೆಗೆದುಕೊಂಡಿದೆ. ರಾಜ್ಯದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಸಂಖ್ಯೆಗೆ ಸಂಬಂಧಿಸಿದಂತೆ ಪ್ರಾದೇಶಿಕ ಭಿನ್ನತೆಗಳಿವೆ. ಆದರೆ ಒಟ್ಟಾರೆ ಹೆಣ್ಣು ಮಕ್ಕಳ ದಾಖಲಾತಿಗೆ ಸಂಬಂಧಿಸಿದ ಸಾಧನೆ ಮಹತ್ವದ್ದಾಗಿದೆ.

3.2. ಆದರೆ ಪ್ರೌಢಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಧನೆಯು, ಮುಖ್ಯವಾಗಿ ರಾಜ್ಯದ ಕೆಲವು ಭಾಗಗಳಲ್ಲಿ ಹೇಳಿಕೊಳ್ಳುವಂತಿಲ್ಲ. ಲಿಂಗ ಸಂಬಂಧದ ಕಾರಣವಾಗಿ, ಸಮುದಾಯಗಳು ವಿಧಿಸುವ ಕಟ್ಟಳೆಗಳಿಂದಾಗಿ, ಬಡತನದಿಂದಾಗಿ ಮತ್ತು ಸಾಂಸ್ಥಿಕ ಸೌಲಭ್ಯಗಳ ಕೊರತೆಯಿಂದಾಗಿ ಶಾಲೆಯನ್ನು ಮಧ್ಯದಲ್ಲಿ ಬಿಡುವವರಲ್ಲಿ ಹೆಣ್ಣು ಮಕ್ಕಳ ಪ್ರಮಾಣ ಅಧಿಕವಾಗಿರುತ್ತದೆ. ಉಪಯೋಗಿಸಬಹುದಾದ, ಅದರಲ್ಲೂ ಹದಿಹರೆಯದ ಬಾಲಕಿಯರು ಉಪಯೋಗಿದಬಹುದಾದ ಸೌಲಭ್ಯಗಳ ಕೊರತೆ, ಋತುಮತಿಯಾದ ತಕ್ಷಣ ಬಾಲಕಿಯ ಮದುವೆಗೆ ಉಂಟಾಗುವ ಕೌಟುಂಬಿಕ ಒತ್ತಡ, ದುಡಿಮೆ/ಕೂಲಿಗೆ ಹೋಗಬೇಕಾದ ಅನಿವಾರ್ಯತೆ, ಲೈಂಗಿಕ ಹಿಂಸೆಯ ಆತಂಕ, ಮಹತ್ವಾಕಾಂಕ್ಷೆಯ ಕೊರತೆ, ವೃತ್ತಿ ನಿರತ ಶಿಕ್ಷಣ ಮತ್ತು ತರಬೇತಿಯ ಕೊರತೆ ಮುಂತಾದವುಗಳ ಕಾರಣವಾಗಿ ಹೆಣ್ಣು ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವ ಒತ್ತಡ ಎದುರಿಸುತ್ತಾರೆ.

3.3 ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಅಭಿವೃದ್ಧಿಗೆ ವಿಶೇಷ ಗಮನ ನೀಡುವ ಅಗತ್ಯವಿದೆ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಹೊಣೆಗಾರರು ಅವರ ಶಿಕ್ಷಣ ಮತ್ತು ಅಭಿವೃದ್ಧಿಗಾಗಿ ಬಹುವಾಗಿ ಪ್ರಯತ್ನಿಸಬೇಕು ಎಂಬುದು ಶೈಕಣಿಕ ಅಭಿವೃದ್ಧಿ ಸೂಚಿಗಳನ್ನು ಪರಿಶೀಲಿಸಿದರೆ ತಿಳಿಯುತ್ತದೆ. ಕುತೂಹಲ ಹುಟ್ಟಿಸುವ, ಸೃಜನಶೀಲ, ತರ್ಕಶುದ್ಧ ಮತ್ತು ಇತರೆ ಜೀವನಕೌಶಲ ಬೆಳೆಸುವಂತಹ ಹಾಗೂ ಬರವಣಿಗೆ ಮತ್ತು ಗಣಿತದ ಜ್ಞಾನವನ್ನು ಬೆಳೆಸುವಂತಹ ವಾತಾವರಣವನ್ನು ರೂಪಿಸುವುದು ಹೆಣ್ಣು ಮಕ್ಕಳ ಅಭಿವೃದ್ಧಿಗೆ ಅಗತ್ಯ. ಆಗ ಮಾತ್ರ ಮಹಿಳೆಯರಾಗಿ ಅವರು ಉದ್ಯೋಗ ಸಾಧ್ಯತೆಗಳನ್ನು ವಿಸ್ತೃತಗೊಳಿಸಿಕೊಳ್ಳಬಹುದು ಮತ್ತು ಅವರು ಸಶಕ್ತೀಕರಣವನ್ನು ಸಾಧಿಸಿಕೊಳ್ಳಬಹುದು.

ಈ ಕಾರ್ಯನೀತಿಯು ಹೆಣ್ಣು ಮಕ್ಕಳ ಶಿಕ್ಷಣದ ಮೇಲೆ ಪರಿಣಾಮ ಬೀರುವ ಲಿಂಗ ಸಂಬಂಧಿ ವಿಶಿಷ್ಟ ಸಂಗತಿಗಳನ್ನು ಗುರುತಿಸುತ್ತದೆ. ಅದಕ್ಕಾಗಿ ಕಾರ್ಯನೀತಿಯು ಕೆಳಗಿನ ಕ್ರಮಗಳನ್ನು ಬೆಂಬಲಿಸುತ್ತದೆ:

3.4. ರಾಜ್ಯದಲ್ಲಿ ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಪ್ರಗತಿಗೆ ಉನ್ನತ ಶಿಕ್ಷಣದಲ್ಲಿರುವ ಲಿಂಗ ಸಂಬಂಧಿ ಅಂತರವನ್ನು ಕಡಿಮೆ ಮಾಡುವ ಅಗತ್ಯವಿದೆ. ಔಪಚಾರಿಕ ಶಿಕ್ಷಣದ ಜೊತೆಯಲ್ಲಿ ಸದ್ಯ ಅಸ್ತಿತ್ವದಲ್ಲಿರುವ ಮುಕ್ತ ಶಾಲೆಗಳು, ದೂರಶಿಕ್ಷಣ, ಕೌಶಲ್ಯ ತರಬೇತಿ ಕೇಂದ್ರಗಳು ಮುಂತಾದವುಗಳಲ್ಲಿ ವಿಶೇಷವಾಗಿ ಪ.ಜಾ, ಪ.ಪಂ. ಅಲ್ಪಸಂಖ್ಯಾತರು ಮತ್ತು ಇತರೆ ದುರ್ಬಲ ವರ್ಗಗಳ ಸಮುದಾಯಗಳಿಗೆ ಸೇರಿದ ಹೆಣ್ಣು ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಕಾಲಬದ್ಧ ಗುರಿಗಳನ್ನು ನಿಗದಿ ಪಡಿಸಬೇಕು ಎಂದು ಸದರಿ ಕಾರ್ಯನೀತಿಯು ಶಿಫಾರಸ್ಸು ಮಾಡುತ್ತದೆ;

3.5. ಶೈಶಾವಸ್ಥೆಯಿಂದ ತಾರುಣ್ಯದ ವಯೋಮಾನದವರೆಗೆ ಆರಂಭಿಕ ಬಾಲ್ಯಾವಸ್ಥೆ ಮತ್ತು ಮಕ್ಕಳ ಶಿಕ್ಷಣ ಕಾಯಿದೆ ಶಾಲೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ, ಶಾಲೆಯಲ್ಲಿ ಉಳಿಯುವ ಮಕ್ಕಳು ಮತ್ತು ಶಾಲಾ ಪ್ರಗತಿಗಳಿಗೆ ಸಂಬಂಧಿಸಿದ ಸಾಧನೆಗಳನ್ನು ಗಣಕ ದತ್ತಾಂಶ ಮತ್ತು ಮಾಹಿತಿ ವ್ಯವಸ್ಥೆಯನ್ನು ಬಲಪಡಿಸುವುದರ ಮೂಲಕ ಪರಿಶೀಲಿಸುವುದು;

3.6. ಎಲ್ಲ ಬಗೆಯ ಶಾಲೆಗಳಲ್ಲಿ ಕಂಡು ಬರುವ ತಾರತಮ್ಯಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಶಾಲಾ ಮಕ್ಕಳು, ಬಾಲ ಕಾರ್ಮಿಕರು, ದುರ್ಬಲ ವರ್ಗ ಮತ್ತು ಅಂಚಿನಲ್ಲಿರುವ ಮಕ್ಕಳನ್ನು ಗುರುತಿಸುವ, ಸಂರಕ್ಷಿಸುವ, ಪುರ್ನವಸತಿ ಒದಗಿಸುವ ಮತ್ತು ಬೆಂಬಲ ನೀಡುವ ಮೂಲಕ ಅವರು ತಮ್ಮ ಹಕ್ಕುಗಳನ್ನು ಚಲಾಯಿಸಲು ನೆರವಾಗಬೇಕು;

3.7. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮಾಹಿತಿ, ಸಂವಹನ ಮತ್ತು ತಂತ್ರಜ್ಞಾನ ಸಾಧನಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಸಂಪರ್ಕರಹಿತ, ದೂರದೂರದ, ಬುಡಕಟ್ಟು ಪ್ರದೇಶಗಳಲ್ಲಿ ಮತ್ತು ಸಂಪರ್ಕದಿಂದ ವಂಚಿತವಾದ ಪ್ರದೇಶಗಳಲ್ಲಿ ಸಮುದಾಯ ಆಧರಿತ ಸೌಲಭ್ಯಗಳನ್ನು ಒದಗಿಸುವುದು;

3.8. ಮಹಿಳಾ ಸಂವೇದನೆಯನ್ನು ಬೆಳೆಸುವಂತಹ ಶಿಕ್ಷಣ ತರಬೇತಿ ವ್ಯವಸ್ಥೆಯನ್ನು ಉನ್ನತ ಮಟ್ಟಕ್ಕೇರಿಸುವುದು ಮತ್ತು ಪುರುಷ ಪ್ರಧಾನ ಮೌಲ್ಯಗಳನ್ನು ತಿರಸ್ಕರಿಸುವಂತಹ ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯಗಳು ಮಕ್ಕಳಲ್ಲಿ ಬೆಳೆಯುವಂತೆ ಮಾಡುವುದು. ಮಕ್ಕಳ ಹಕ್ಕುಗಳ ಶಿಕ್ಷಣ, ಕಾನೂನುಗಳು, ಮಕ್ಕಳಿಗೆ ಸಂಬಂಧಿಸಿದ ಸೇವಾ ಸೌಲಭ್ಯಗಳು, ಸಂರಕ್ಷಣಾ ವ್ಯವಸ್ಥೆ, ಲಿಂಗ ಸಂಬಂಧಿ ಸಮಸ್ಯೆಗಳು, ಸುರಕ್ಷತೆ ಮತ್ತು ಸುಭದ್ರತೆ, ಮಕ್ಕಳ ಮಾರಾಟ ಹಾಗೂ ಲೈಂಗಕ ಶಿಕ್ಷಣ ಮತ್ತು ಶಾಲಾ ಪಠ್ಯಕ್ರಮದಲ್ಲಿನ ಜೀವನಕೌಶಲ್ಯ ಮುಂತಾದ ಸಂಗತಿಗಳ ಬಗ್ಗೆ ಹೆಣ್ಣು ಮಕ್ಕಳಿಗೆ ಮಾಹಿತಿ ಒದಗಿಸುವದಕ್ಕೆ ತಕ್ಕುದಾದ ಕುಶಲತೆಯ ತರಬೇತಿಯನ್ನು ಶಿಕ್ಷಕರಿಗೆ ನೀಡಬೇಕು;

3.9. ಕರ್ನಾಟಕ ರಾಜ್ಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳ ಸಂರಕ್ಷಣೆ ಕಾಯಿದೆಯ ಸೂತ್ರಗಳಿಗೆ ಅನುಗುಣವಾಗಿ ಶಾಲೆಗಳಲ್ಲಿ ಮಕ್ಕಳಿಗೆ ಸುರಕ್ಷತೆ ಮತ್ತು ಸಂರಕ್ಷಣೆಯನ್ನು ಒದಗಿಸುವುದು ಮತ್ತು ಶಾಲೆಗಳಲ್ಲಿ ದೂರು ಪರಿಹಾರ ವ್ಯವಸ್ಥೆಯನ್ನು ಸ್ಥಾಪಿಸುವುದು.

**ಜನನದಿಂದ ಮೂರು ಮತ್ತು ಮೂರು ವರ್ಷದಿಂದ ಆರು ವರ್ಷಗಳವರೆಗೆ**

3.10. ಜನನದಿಂದ ಆರು ವರ್ಷದವರೆಗಿನ ಎಲ್ಲ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ, ಸಾರ್ವತ್ರಿಕ ಮತ್ತು ಸಮಾನತೆಯಿಂದ ಕೂಡಿದ ಆರಂಭಿಕ ಮಕ್ಕಳ ಶಿಕ್ಷಣ ಮತ್ತು ಪಾಲನೆ-ಪೋಷಣೆ ಸೇವೆಯನ್ನು ಎಲ್ಲ ಹಂತಗಳಲ್ಲಿ ಒದಗಿಸುವುದಕ್ಕಾಗಿ ಆರಂಭಿಕ ಬಾಲ್ಯಾವಸ್ಥೆ ಮತ್ತು ಮಕ್ಕಳ ಶಿಕ್ಷಣ ಕಾಯಿದೆಯನ್ನು ಅನುಷ್ಠಾನಗೊಳಿಸಬೇಕು ಮತ್ತು ಸದರಿ ಕಾರ್ಯನೀತಿಯ ಅನುಷ್ಠಾನಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ವಿನಿಯೋಗಿಸಬೇಕು. ಸದರಿ ಕಾಯಿದೆ ಪ್ರಕಾರ ಆರಂಭಿಕ ಬಾಲ್ಯಾವಸ್ಥೆ ಮತ್ತು ಮಕ್ಕಳ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಬೇಕು, ಮತ್ತು ಅದನ್ನು ಸಶಕ್ತವನ್ನಾಗಿಸುವುದು ಮತ್ತು ಅದನ್ನು ಕ್ರಿಯಾಶೀಲವನ್ನಾಗಿ ಮಾಡುವುದು.

3.11. ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ನಿಗದಿತ ಸಮಯದಲ್ಲಿ ಸಮಗ್ರ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮವನ್ನು ಪುನಾರಚಿಸುವುದು.

3.12. ಗಂಡಾಂತರಕ್ಕೆ ಒಳಗಾದ, ಬಡ, ರೋಗಗಳಿಗೆ ತುತ್ತಾದ ಮತ್ತು ದುಡಿಯುವ ತಾಯಂದಿರನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಮಕ್ಕಳ ಸಂಗೋಪನಾ ಸೇವೆಯನ್ನು (ಶಿಶು ಪಾಲನ ಕೇಂದ್ರ, ಶಿಶುವಿಹಾರ/ಅಂಗನವಾಡಿ ಕೇಂದ್ರ)ಸಂಪೂರ್ಣವಾಗಿ ನೀಡುವುದು.

3.13. ಆರಂಭಿಕ ಬಾಲ್ಯಾವಸ್ಥೆ ಮತ್ತು ಮಕ್ಕಳ ಶಿಕ್ಷಣ ಕಾಯಿದೆ ಕೇಂದ್ರಗಳು ಮಕ್ಕಳ ಸ್ನೇಹಿಯಾಗುವಂತೆ ಮಾಡುವುದು, ಮಕ್ಕಳು ನಗುನಗುತ್ತಾ ಕಲಿಯಲು ಸಾಧ್ಯವಾಗುವಂತಹ ಚಟುವಟಿಕೆಗಳನ್ನು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಒದಗಿಸುವುದು. ಮಕ್ಕಳಿಗೆ ನೀಡುವ ಆಟೋಟ ಚಟುವಟಿಕೆ ಆಟಿಕೆಗಳು ಲಿಂಗ ನಿರ್ಲಿಪ್ತವಾಗಿರುವಂತೆ ನೋಡಿಕೊಳ್ಳಬೇಕು.

3.14. ಆರಂಭಿಕ ಬಾಲ್ಯಾವಸ್ಥೆ ಮತ್ತು ಮಕ್ಕಳ ಶಿಕ್ಷಣ ಕಾಯಿದೆಯ ಅನುಕೂಲಗಳನ್ನು ಪಡೆದುಕೊಳ್ಳುತ್ತಿರುವ(ಸಾರ್ವಜನಕ ಹಾಗೂ ಖಾಸಗಿ ಸಂಸ್ಥೆಗಳು) ಹೆಣ್ಣು ಮಕ್ಕಳಿಗೆ ಪಾಲನೆ-ಪೋಷಣೆ ಮತ್ತು ಪ್ರೇರೇಪಣೆ ನೀಡುವುದಕ್ಕಾಗಿ ಅವರು ಸಾರ್ವತ್ರಿಕ ದಾಖಲಾತಿಯನ್ನು ಸಾಧಿಸಿಕೊಳ್ಳುವುದಕ್ಕೆ ಅವರ ಮೇಲ್ವಿಚಾರಣೆಯನ್ನು ಶಾಸನಾತ್ಮಕವಾಗಿ ಮಾಡುವುದು.

**ಆರರಿಂದ ಹದಿನಾಲ್ಕು ವಯೋಮಾನದವರೆಗೆ**

3.15. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯನ್ನು ಅನುಷ್ಠಾನಗೊಳಿಸುವುದು;

3.16. ಅರ್ಹ ಮಹಿಳಾ ಶಿಕ್ಷಕಿಯರು ಸಾಕಷ್ಟು ಸಂಖ್ಯೆಯಲ್ಲಿ, ಅದರಲ್ಲೂ ಹಿಂದುಳಿದ ಪ್ರದೇಶಗಳಲ್ಲಿ ಇರುವಂತೆ ನೋಡಿಕೊಳ್ಳುವುದು ಮತ್ತು ಅವರ ಜ್ಞಾನ, ವರ್ತನೆ ಮತ್ತು ಕುಶಲತೆಗಳನ್ನು ಕಾಲಕಾಲಕ್ಕೆ ಉತ್ತಮ ಪಡಿಸುವುದು;

3.17. ಸಾಮಾನ್ಯ ಶಾಲೆಗಳಲ್ಲಿರುವ ವಿಶೇಷ ಅಗತ್ಯಗಳಿರುವ ಹೆಣ್ಣು ಮಕ್ಕಳಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ಒದಗಿಸುವುದು ಮತ್ತು ಆ ಎಲ್ಲ ಮಕ್ಕಳು ಶಾಲೆಯ ಪ್ರಧಾನಧಾರೆಯಲ್ಲಿ ಸೇರಿ ಹೋಗುವಂತೆ ಮಾಡುವುದು;

3.18. ಪ್ರತಿಭಾವಂತ ಹೆಣ್ಣು ಮಕ್ಕಳನ್ನು, ಅದರಲ್ಲೂ ದುರ್ಬಲ ವರ್ಗಗಳಿಗೆ ಮತ್ತು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿನ ಗುಂಪುಗಳಿಗೆ ಸೇರಿದ ಹೆಣ್ಣು ಮಕ್ಕಳನ್ನು ಗುರುತಿಸುವುದು ಮತ್ತು ಅವರಿಗೆ ಪ್ರೋತ್ಸಾಹ ಮತ್ತು ಸಹಕಾರ ನೀಡುವುದು;

3.19. ಎಲ್ಲ ಬಾಲಮಂದಿರಗಳಲ್ಲಿ ಮತ್ತು ಜುವಿನೈಲ್ ಜಸ್ಟೀಸ್ ಮಂದಿರಗಳಲ್ಲಿ ಹೆಣ್ಣು ಮಕ್ಕಳಿಗೆ ಮನೆಪಾಠದ ವ್ಯವಸ್ಥೆಯ ಮೂಲಕ ಸೇತುಬಂಧ ಶಿಕ್ಷಣದ ಮೂಲಕ, ಔಪಚಾರಿಕ ಶಿಕ್ಷಣದ ಮೂಲಕ ಮತ್ತು ಮುಕ್ತ ಶಾಲಾ ಪರೀಕ್ಷೆಗೆ ಬೋಧನೆ ನೀಡುವುದರ ಮೂಲಕ ನೆರವನ್ನು ನೀಡುವುದು.

**ಹದಿನಾಲ್ಕು ವರ್ಷದಿಂದ ಹದಿನೆಂಟು ವಯೋಮಾನದವರೆಗೆ**

3.20. ಸಾಮಾಜಿಕ ಮತ್ತು ಆರ್ಥಿಕ ದುಸ್ಥಿತಿಯಲ್ಲಿರುವ ಸಮುದಾಯಗಳ ಹೆಣ್ಣು ಮಕ್ಕಳಿಗೆ ಅವರ 18ನೆಯ ವಯೋಮಾನದವರೆಗೆ ಅಥವಾ 12ನೆಯ ತರಗತಿವರೆಗೆ, ಇದರಲ್ಲಿ ಯಾವುದು ಉನ್ನತವಾದುದಾಗಿರುತ್ತದೋ ಅಲ್ಲಿಯವರೆಗೆ, ಉತ್ತೇಜನ ಮತ್ತು ವಿದ್ಯಾರ್ಥಿವೇತನಗಳನ್ನು ನೀಡುವುದರ ಮೂಲಕ ಶಿಕ್ಷಣ ಒದಗಿಸುವುದು;

3.21. ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಹೆಣ್ಣು ಮಕ್ಕಳಗೆ ಪರಿಹಾರ ಬೋಧನೆ ನೀಡುವುದರ ಮೂಲಕ ಪ್ರಧಾನಧಾರೆಯಲ್ಲಿ ಅವರು ಬೆರೆಯುವಂತೆ ಮಾಡುವುದು, ಸೇತುಬಂಧ ಶಿಕ್ಷಣದ ಮೂಲಕ ಅಂತಹ ಹೆಣ್ಣು ಮಕ್ಕಳಿಗೆ ಮೀಸಲಾತಿ ನೀಡುವುದರ ಮೂಲಕ ಹಾಗೂ ವಸತಿಶಾಲೆಗಳಲ್ಲಿ ಅವಕಾಶ ನೀಡುವುದರ ಮೂಲಕ ಅವರು ತಮ್ಮ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳುವುದು;

3.22. ಜೀವನೋಪಾಯಕ್ಕೆ ಅಗತ್ಯವಾದ ಕ್ರಮಗಳನ್ನು ಪ್ರೋತ್ಸಾಹಿಸುವುದು ಮತ್ತು ಉತ್ತಮ ಗುಣಮಟ್ಟದ ಸಮುದಾಯ ಆಧರಿತ ವೃತ್ತಿಪರ ಶಿಕ್ಷಣವನ್ನು ಅಭಿವೃದ್ಧಿಪಡಿಸುವುದು;

3.23. ಎಲ್ಲ ಜುವಿನೈಲ್ ಜಸ್ಟೀಸ್ ಸಂಸ್ಥೆಗಳಲ್ಲಿ, ಬಾಲಮಂದಿರಗಳಲ್ಲಿ ಮತ್ತು ಸಾಮಾನ್ಯ ಶಾಲೆಗಳಲ್ಲಿರುವ ಎಲ್ಲ ಹೆಣ್ಣು ಮಕ್ಕಳಿಗೆ ವೃತ್ತಿಪರ ಶಿಕ್ಷಣ ಮತ್ತು ಉದ್ಯೋಗ ಮಾರ್ಗದರ್ಶನ ಮತ್ತು ಸಲಹೆ ಸಮಾಲೋಚನಾ ಸೌಲಭ್ಯಗಳನ್ನು ಒದಗಿಸುವುದು.

3.24. ಸ್ಥಳೀಯ ಚುನಾಯಿತ ಸಂಸ್ಥೆಗಳು, ಗ್ರಾಮ ಪಂಚಾಯತಿ ಸದಸ್ಯರು, ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣ ಸಮಿತಿಗಳು, ಮಹಿಳಾ ಸಂಘಟನೆಗಳು ಮತ್ತು ಇತರೆ ಶಾಸನಾತ್ಮಕ ಸಂಸ್ಥೆಗಳು ಶಾಲೆಯಲ್ಲಿ ಹೆಣ್ಣು ಮಕ್ಕಳ ದಾಖಲಾತಿ ಮತ್ತು ಅವರು ಶಾಲೆಯಲ್ಲಿನ ಶಿಕ್ಷಣ ಮುಂದುವರಿಸುವ ವಿಷಯವನ್ನು ಪರಿಶೀಲಿಸುವಂತೆ ಪ್ರೋತ್ಸಾಹಿಸುವುದು.

## 4. ಸಂರಕ್ಷಣೆ ಮತ್ತು ಸುರಕ್ಷತೆ

4.1. ಮಕ್ಕಳ ಸಂರಕ್ಷಣೆ ಅಂದರೆ

* ಮಕ್ಕಳು, ಅದರಲ್ಲೂ ದುಸ್ಥಿತಿಯಲ್ಲಿರುವ ಮಕ್ಕಳೆಲ್ಲ ಸುರಕ್ಷಿತರಾಗಿರುವ, ನಿರ್ಲಕ್ಷ್ಯತನದಿಂದ, ದೌರ್ಜನ್ಯದಿಂದ, ಶೋಷಣೆಯಿಂದ ಮತ್ತು ಇತರೆ ಯಾವುದೇ ಬಗೆಯ ಹಿಂಸೆಯಿಂದ ಮುಕ್ತವಾದ ವಾತಾವರಣದಲ್ಲಿ ಮಕ್ಕಳು ಬದುಕುವಂತೆ ಮಾಡುವುದು.

* ಕುಟುಂಬ ಮಟ್ಟದಲ್ಲಿ, ಶಾಲೆಗಳಲ್ಲಿ, ಶಿಶುಪಾಲನ ಕೇಂದ್ರಗಳಲ್ಲಿ ಅಥವಾ ಶೈಕ್ಷಣಿಕ ಕೇಂದ್ರಗಳಲ್ಲಿ ಮತ್ತು ಇತರೆ ಯಾವುದೇ ಮಕ್ಕಳು ಬದುಕುವ ಸನ್ನಿವೇಶದಲ್ಲಿ ಅವರಿಗೆ ಉಂಟಾಗಬಹುದಾದ ಭೌತಿಕ, ಮಾನಸಿಕ ಕೆಡುಕು, ಹಿಂಸೆ ಅಥವಾ ಅಪಾಯಗಳಿಂದ ಸಂರಕ್ಷಿಸುವುದು

* ಆತಂಕಕಾರಿ ಸನ್ನಿವೇಶವನ್ನು ನಿವಾರಿಸುವುದು/ ಅದರ ವಿರುದ್ಧ ಕ್ರಮ ತೆಗೆದುಕೊಳ್ಳುವುದು.

* ಮಕ್ಕಳಿಗೆ ಪಾಲನೆ-ಪೋಷಣೆ ಸೇವೆ ಮತ್ತು ಪ್ರೋತ್ಸಾಹದಾಯಕ ವ್ಯವಸ್ಥೆಯನ್ನು ಒದಗಿಸುವುದು,

* ಮಕ್ಕಳು ಸುರಕ್ಷತಾ ಜಾಲ ಮತ್ತು ಸಾಮಾಜಿಕ ಭದ್ರತೆ ವ್ಯಾಪ್ತಿಯಿಂದ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುವುದು.

ಮತ್ತು

* ಮಕ್ಕಳಿಗೆ ಉತ್ತರದಾಯಿತ್ವದಿಂದಿರುವ ಮತ್ತು ಜನರಿಗೆ ಜವಾಬುದಾರಿಯಾದ ಸರ್ಕಾರ ಎಲ್ಲಿರುತ್ತದೋ ಅಂತಹ ವಾತಾವರಣವನ್ನು 'ಮಕ್ಕಳ ಸುರಕ್ಷತೆ' ಎಂದು ಕರೆಯಬಹುದು.

4.2. ನಮ್ಮ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮತ್ತು ಕೆಲವು ಸಮುದಾಯಗಳಲ್ಲಿ ಹೆಣ್ಣು ಮಕ್ಕಳು ಹೆಚ್ಚಿನ ಗಂಡಾಂತರಗಳನ್ನು ಎದುರಿಸುತ್ತಿದ್ದಾರೆ. ಅವರು ಬಾಲ್ಯ ವಿವಾಹ, ಅಪ್ರಾಪ್ತ ವಯೋಮಾನದಲ್ಲಿ ಗರ್ಭಿಣಿಯರಾಗುವುದು, ಅಪಾಯಕಾರಿ ಉದ್ಯೋಗದಲ್ಲಿ ನಿರತರಾಗುವುದು, ವಾಣಿಜ್ಯ ಲೈಂಗಿಕ ಶೋಷಣೆ, ಕೌಟುಂಬಿಕ ಹಿಂಸೆ ಮುಂತಾದ ಮತ್ತು ವಿವಿಧ ಬಗೆಯ ದೈಹಿಕ ಮಾರಾಟದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಬಗೆಯ ಹೆಣ್ಣು ಮಕ್ಕಳಿಗೆ ರಕ್ಷಣೆ ಒದಗಿಸುವ ಮತ್ತು ಸುರಕ್ಷತೆಯನ್ನು ನೀಡುವ ಕ್ರಮಗಳನ್ನು ಮತ್ತು ಕಾರ್ಯಕ್ರಮಗಳನ್ನು ವಿಶೇಷವಾಗಿ ಹಮ್ಮಿಕೊಳ್ಳುವುದು ಸರ್ಕಾರದ ಜವಾಬುದಾರಿಯಾಗಿರುತ್ತದೆ.

4.3. ವಿಕಲಚೇತನ ಮಕ್ಕಳು, ವಿಶೇಷ ಆರೈಕೆ/ಗಮನ ಅಗತ್ಯವಾದ ಮಕ್ಕಳು ಮತ್ತು ಮೂರನೆ ಲಿಂಗಿ ಮಕ್ಕಳ ವಿಷಯದಲ್ಲಿ ಸರ್ಕಾರವು ವಿಶೇಷ ಗಮನ ನೀಡಬೇಕು.

4.4. ಸಂರಕ್ಷಣಾತ್ಮಕ ಶಾಸನಗಳು ಮತ್ತು ಸಂವಿಧಾನಾತ್ಮಕ ನೀತಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಲಿಂಗ ತಾರತಮ್ಯವನ್ನು, ಶೋಷಣೆಯನ್ನು, ಹೆಣ್ಣು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳನ್ನು ತೊಡೆದು ಹಾಕಲು ಪ್ರಯತ್ನಿಸಬೇಕು ಮತ್ತು ಸದ್ಯ ಜಾಲ್ತಿಯಲ್ಲಿರುವ ಸಂರಕ್ಷಣಾತ್ಮಕ ಕ್ರಮಗಳನ್ನು ಬಲಪಡಿಸುವುದರ ಮೂಲಕ ಹಾಗೂ ಪರಿಣಾಮಕಾರಿಯಾಗಿ ಸಮನ್ವಯವನ್ನು ಸಾಧಿಸಿಕೊಂಡು ಮತ್ತು ಇಂತಹ ಸಮಸ್ಯೆಗಳಿಗೆ ಪ್ರತಿಸ್ಪಂದಿಸುವ ವ್ಯವಸ್ಥೆಯನ್ನು ಪರಿಣಾಮಕಾರಿಯನ್ನಾಗಿ ಮಾಡುವುದರ ಮೂಲಕ ಮಕ್ಕಳ ರಕ್ಷಣೆಯನ್ನು ಸಾಧಿಸಿಕೊಳ್ಳಬೇಕು.

4.5. ರಾಜ್ಯಾದ್ಯಂತ ಮಕ್ಕಳ ಸಹಾಯವಾಹನಿಯಂತಹ(1098)ಮಕ್ಕಳ ಸಂರಕ್ಷಣಾ ವ್ಯವಸ್ಥೆಯನ್ನು ಮತ್ತು ಶಾಸನಾತ್ಮಕ ಸಂಸ್ಥೆಗಳನ್ನು ಬಲಪಡಿಸಿವುದರ ಮೂಲಕ ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಮತ್ತು ಅಪರಾಧಗಳ ಸಂದರ್ಭದಲ್ಲಿ ಸರ್ಕಾರವು ತ್ವರಿತವಾಗಿ ಮತ್ತು ಯೋಗ್ಯವಾದ ನ್ಯಾಯ ನೀಡುವ ನ್ಯಾಯಾಂಗ ವ್ಯವಸ್ಥೆಯನ್ನು ರೂಪಿಸಬೇಕು. ದೌರ್ಜನ್ಯಕ್ಕೆ ಮತ್ತು ಶೋಷಣೆಗೆ ಒಳಗಾಗಿ ಜೀವದಿಂದುಳಿದ ಹೆಣ್ಣು ಮಕ್ಕಳ ಸಂದರ್ಭದಲ್ಲಿ ಪ್ರಮಾಣೀಕೃತ ಕಾರ್ಯಾಚರಣೆ ಆಡಳಿತ ಕ್ರಮವನ್ನು ಅನುಸರಿಸಿ ಅಂತಹ ಹೆಣ್ಣು ಮಕ್ಕಳ ಖಾಸಗಿತನವನ್ನು ಮತ್ತು ಗೋಪ್ಯತೆಯನ್ನು ಕಾಪಾಡಬೇಕು. ಜುವಿನೈಲ್ ಜಸ್ಟೀಸ್ ವ್ಯವಸ್ಥೆಯಲ್ಲಿ ಕೆಲಸ ಮಾಡುವವರಿಗೆ ಮತ್ತು ಮಾಧ್ಯಮ ವರದಿ ಮಾಡುವವರಿಗೆ ಲಿಂಗ ಸಂವೇದನೆಯ ತರಬೇತಿ ಒದಗಿಸಬೇಕು.

4.6. ಮಹಿಳೆಯರ ಮೇಲೆ ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುವ ಹಿಂಸೆಯನ್ನು ನಿರ್ಮೂಲನೆ ಮಾಡುವ ಮತ್ತು ತಡೆಯುವ ವಿಷಯವನ್ನು ಕುರಿತಂತೆ ಸಾರ್ವಜನಿಕ ಚರ್ಚೆ, ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳಲ್ಲಿ, ಮಾಧ್ಯಮಗಳಿಗೆ ನೀಡುವ ಮಾಹಿತಿಯಲ್ಲಿ ಮತ್ತು ಸಮುದಾಯ ಆಧರಿತ ಕಾರ್ಯಕ್ರಮಗಳಲ್ಲಿ ಬಾಲಕರನ್ನು ಮತ್ತು ಪುರುಷರನ್ನು ತೊಡಗಿಸಿಕೊಳ್ಳುವ ಕ್ರಮಗಳನ್ನು ಸರ್ಕಾರ ಪ್ರೋತ್ಸಾಹಿಸಬೇಕು.

4.7. ವಿಶೇಷವಾಗಿ ಸರ್ಕಾರ ಮಾಡಬೇಕಾದ ಕರ್ತವ್ಯಗಳೆಂದರೆ:

4.7.1. ಹೆಣ್ಣು ಮಕ್ಕಳ ಸಂರಕ್ಷಣೆಯ ವಿಷಯ ಕುರಿತಂತೆ ಸರ್ಕಾರ, ನಾಗರಿಕ ಸಮಾಜ, ಮಾಧ್ಯಮ ಮುಂತಾದ ಎಲ್ಲ ಹೊಣೆಗಾರರನ್ನು ಜವಾಬುದಾರರನ್ನಾಗಿ ಮಾಡಲು ಸಹಯೋಗ ಮತ್ತು ಸಮನ್ವಯ ಕ್ರಮಗಳಲ್ಲಿ ಎಲ್ಲರನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಬೇಕು.

4.7.2. ಹೆಣ್ಣು ಮಕ್ಕಳ ಸಂರಕ್ಷಣೆಯ ವಿಷಯವನ್ನು ಎಲ್ಲ ಹೊಣೆಗಾರರು ಮುಕ್ತವಾಗಿ ಚರ್ಚೆ ಮಾಡುವಂತೆ ಪ್ರೋತ್ಸಾಹಿಸಬೇಕು. ಇದಲ್ಲದೆ ಎಲ್ಲ ಹೆಣ್ಣು ಮಕ್ಕಳು ಯಾವುದೇ ಭಯವಿಲ್ಲದೆ ಹಿಂಸೆ, ದೌರ್ಜನ್ಯಗಳ ವಿರುದ್ಧ ಮತ್ತು ಇತರೆ ಸಂರಕ್ಷಣಾ ವಿಷಯ ಕುರಿತಂತೆ ಮಾತನಾಡಲು ಅವಕಾಶ ನೀಡಬೇಕು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅರ್ಹ ಗುಣಮಟ್ಟದ ಆಪ್ತ ಸಲಹೆಗಾರರು ದೌರ್ಜನ್ಯಕ್ಕೆ ಒಳಗಾದ ಹೆಣ್ಣು ಮಕ್ಕಳಿಗೆ ದೊರೆಯುವಂತೆ ನೋಡಿಕೊಳ್ಳಬೇಕು.

4.7.3. ಯಾವ ವರ್ಗದ ಹೆಣ್ಣು ಮಕ್ಕಳು ಹೆಚ್ಚಿನ ಗಂಡಾಂತರ ಮತ್ತು ಅಪಾಯಗಳಿಗೆ ಒಳಗಾಗಬಹುದು ಎಂಬುದನ್ನು ಗುರುತಿಸಬೇಕು. ಆದ್ದರಿಂದ ಇದಕ್ಕೆ ವಿಶೇಷ ಗಮನ ನೀಡಬೇಕು ಮತ್ತು ಇದಕ್ಕೆ ಸಂಬಂಧಸಿದ ಕ್ರಮಗಳಿಗೆ ಸಂಬಂಧಿಸಿದಂತೆ ಕೆಳಕಂಡ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡಬೇಕು.

ಅ). ವಿಶೇಷ ಆರೈಕೆ ಅಗತ್ಯವಿರುವ ಮತ್ತು ವಿಕಲ ಚೇತನದ ಹೆಣ್ಣು ಮಕ್ಕಳು

ಆ). ಬೀದಿಯಲ್ಲಿ ಬದುಕುವ ಹೆಣ್ಣು ಮಕ್ಕಳು

ಇ). ಪಾಲಕರ ಪೋಷಣೆಯಿಂದ ವಂಚಿತರಾದ ಹೆಣ್ಣು ಮಕ್ಕಳು

ಈ). ಕೌಟುಂಬಿಕ ದುಡಿಮೆ, ಕಟ್ಟಡ ನಿರ್ಮಾಣ ಕಾಮಗಾರಿ, ಕೃಷಿ ಮತ್ತು ತತ್ಸಂಬಂಧಿ ವಲಯಗಳಲ್ಲಿ ದುಡಿಯುವ ಹೆಣ್ಣು ಮಕ್ಕಳು

ಉ). ದೇವದಾಸಿಯರ ಮಕ್ಕಳು ಅಥವಾ ಲೈಂಗಿಕ ದುಡಿಮೆಯ ಮಹಿಳೆಯರು

ಊ). ವಲಸೆ ಕುಟುಂಬಗಳ ಹೆಣ್ಣು ಮಕ್ಕಳು

ಎ). ದುಸ್ಥಿತಿ ಮತ್ತು ಬಡತನದಲ್ಲಿ ಬದುಕುತ್ತಿರುವ ಹೆಣ್ಣು ಮಕ್ಕಳು.

4.7.4. ಹೆಣ್ಣು ಶಿಶುಗಳ ಮಾರಾಟ, ಬಾಲ್ಯವಿವಾಹ, ಮಕ್ಕಳ ಮಾರಾಟ, ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿ ಮಾಡುವುದು, ಬಿಕ್ಷಾಟನೆ, ಕೌಟುಂಬಿಕ ದುಡಿಮೆ ಮುಂತಾದ ಗಂಡಾಂತರಗಳಿಗೆ ಒಳಗಾದ ಹೆಣ್ಣು ಮಕ್ಕಳ ಪ್ರದೇಶ ವಿಶಿಷ್ಟ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕಾಲಬದ್ಧ ಮತ್ತು ಪುನರ್ವಸತಿ ಸೇವೆ ಹಾಗೂ ಅಗತ್ಯವಾದ ಸಂಪನ್ಮೂಲ ಒದಗಿಸುವ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ ಅನುಷ್ಠಾನಗೊಳಿಸಬೇಕು.

4.7.5. ಕಾನೂನಾತ್ಮಕ ಸಂಘರ್ಷದಲ್ಲಿ ತೊಡಗಿರುವ ಮಕ್ಕಳು ಮತ್ತು ವಿಶೇಷ ನೆರವು ಅಗತ್ಯವಾದ ಮಕ್ಕಳು ಅಥವಾ ವಿಕಲಚೇತನ ಮಕ್ಕಳ ವಿಷಯದಲ್ಲಿ ಸಂವೇದನಾಶೀಲವಾದ ಶಿಶುಪಾಲನಾ ಕೇಂದ್ರಗಳಲ್ಲಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಮಕ್ಕಳ ಸೇವೆಯಲ್ಲಿ ನಿರತವಾಗಿರುವ ಸಂಸ್ಥೆಗಳಲ್ಲಿ ಕನಿಷ್ಠ ಪ್ರಮಾಣದ ಸಂರಕ್ಷಣೆ ಮತ್ತು ಪಾಲನೆ ದೊರೆಯುವಂತೆ ಮಾಡಬೇಕು.

4.7.6. ಕುಟುಂಬಗಳಲ್ಲಿ, ಸಮುದಾಯಗಳಲ್ಲಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳನ್ನು ಘನತೆಯಿಂದ ನೋಡುವ ಮತ್ತು ಗೌರವದಿಂದ ಅವರ ಜೊತೆಯಲ್ಲಿ ವರ್ತಿಸುವ ಹಾಗೂ ಎಲ್ಲ ಬಗೆಯ ದೌರ್ಜನ್ಯ, ಶೋಷಣೆ ಮತ್ತು ಲಿಂಗ ಸಂಬಂಧಿ ಹಿಂಸೆಯನ್ನು ತಿರಸ್ಕರಿಸುವ ವಾತಾವರಣವನ್ನು ಪ್ರೋತ್ಸಾಹಿಸಬೇಕು. ಮೂಢ ನಂಬಿಕೆಗಳು, ಸಂಪ್ರದಾಯಗಳು, ರೂಢಿಗಳು ಮತ್ತು ಲಿಂಗ ತಾರತಮ್ಯ ಹಾಗೂ ಲಿಂಗ ಅಸಮಾನತೆಯನ್ನು ಊರ್ಜಿತಗೊಳಿಸುವ ಕ್ರಮಗಳನ್ನು ಎದುರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಜನರ ವರ್ತನೆ ಮತ್ತು ನಡವಳಿಕೆಗಳಲ್ಲಿ ಬದಲಾವಣೆ ಉಂಟು ಮಾಡುವ ಕ್ರಮಗಳನ್ನು ಪ್ರೋತ್ಸಾಹಿಸಬೇಕು.

**ಜನನದಿಂದ ಮೂರು ವರ್ಷದವರೆಗೆ ಮತ್ತು ಮೂರರಿಂದ ಆರು ವರ್ಷಗಳವರೆಗೆ**

ಸರ್ಕಾರವು ಮಾಡಬೇಕಾದ ಕರ್ತವ್ಯಗಳೆಂದರೆ:

4..8. ಹೆಣ್ಣು ಮಕ್ಕಳು ಜೀವದಿಂದುಳಿಯುವ, ಹೆಣ್ಣು ಭ್ರೂಣಹತ್ಯೆಗೆ ಮತ್ತು ಹೆಣ್ಣು ಶಿಶುಗಳ ಮಾರಾಟ ನಿಷೇಧಕ್ಕೆ ಸಂಬಂಧಿಸಿದ ಶಾಸನಾತ್ಮಕ ಕ್ರಮಗಳು ಮತ್ತು ಗರ್ಭಧಾರಣೆಪೂರ್ವ, ಪ್ರಸವಪೂರ್ವ ಪರೀಕ್ಷಾ ತಂತ್ರಜ್ಞಾನ ಕಾಯಿದೆಗಳು ಕಟ್ಟುನಿಟ್ಟಾಗಿ ಅನುಷ್ಠಾನವಾಗುವಂತೆ ನೋಡಿಕೊಳ್ಳುವುದು

4..9. ಸಾಂಪ್ರದಾಯಿಕ ಮತ್ತು ಮೂಢನಂಬಿಕೆಗಳ ಕಾರಣವಾಗಿ ಹೆಣ್ಣು ಮಕ್ಕಳ ದೇಹದ ಮೇಲೆ ಬರೆ ಹಾಕುವ ಅಥವಾ ಅಂಗ ಛೇದನ ಮಾಡುವ ಅಪಾಯಗಳಿಂದ ಶಾಸನಾತ್ಮಕ ಕ್ರಮಗಳ ಮೂಲಕ ಮತ್ತು ಜಾಗೃತಿ ಆಂದೋಳನಗಳ ಮೂಲಕ ಹೆಣ್ಣು ಶಿಶುಗಳನ್ನು ರಕ್ಷಿಸಬೇಕು.

4.10. ಪಾಲಕರ ಪೋಷಣೆಯಿಂದ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ವಂಚಿತರಾದ ಹೆಣ್ಣು ಮಕ್ಕಳಿಗೆ ಪರ್ಯಾಯ ಸಾಂಸ್ಥಿಕೇತರ ದತ್ತು ಸ್ವೀಕಾರದ ಅಥವಾ ಮಕ್ಕಳ ಶುಶ್ರೂಷಾ ಕೇಂದ್ರಗಳ ಅಥವಾ ಸಮುದಾಯ ಆಧರಿತ ಮಕ್ಕಳ ಪ್ರಾಯೋಜನೆ ಮೂಲಕ ಪಾಲಕರ ಪೋಷಣೆ ಪಡೆಯುವ ಹೆಣ್ಣು ಮಕ್ಕಳ ಹಕ್ಕನ್ನು ರಕ್ಷಿಸಬೇಕು.

4.11. ಶಾಸನಾತ್ಮಕ ಜುವಿನೈಲ್ ಜಸ್ಟೀಸ್(ಪಾಲನೆ ಮತ್ತು ಸಂರಕ್ಷಣೆ)ಕಾಯಿದೆ 2015 ಮತ್ತು ಪರಿಷ್ಕರಿಸಿದ ಕೇಂದ್ರದ ಮಹಿಳಾ ಮತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿರುವ ಕೇಂದ್ರ ದತ್ತು ಸ್ವೀಕಾರ ಸಂಪನ್ಮೂಲ ಪ್ರಾಧಿಕಾರದ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ದತ್ತು ಸ್ವೀಕಾರ ಕ್ರಮವನ್ನು ಪಾಲಿಸಬೇಕು.

4.12. ಹೆಣ್ಣು ಶಿಶುಗಳ ಮಾರಾಟ ಮತ್ತು ಅಕ್ರಮ ದತ್ತು ಸ್ವೀಕಾರದ ಸಂಗತಿಗಳನ್ನು ನಿಷೇಧಿಸುವ ಕ್ರಮಗಳನ್ನು ರೂಪಿಸಿ ಅದರ ಅನುಷ್ಠಾನಕ್ಕೆ ಕ್ರಮ ತೆಗೆದುಕೊಳ್ಳಬೇಕು.

**ಆರರಿಂದ ಹದಿನೆಂಟನೆಯ ವಯೋಮಾನದವರೆಗೆ**

4.13. ಮೂಲಭೂತ ಸೌಕರ್ಯ, ಸಾರಿಗೆ, ಆರೋಗ್ಯ, ಕ್ರೀಡೆ, ವೈಯುಕ್ತಿಕ, ಭಾವನಾತ್ಮಕ, ಲೈಂಗಿಕ ಸುರಕ್ಷತೆ, ಸೈಬರ್ ಸುರಕ್ಷತೆ, ವಿಕೋಪಗಳು ಮತ್ತು ತುರ್ತ ಪರಿಸ್ಥಿತಿ ಮುಂತಾದ ಸಂಗತಿಗಳಿಂದ ಉಂಟಾಗುವ ಅಪಾಯಗಳಿಂದ ಹೆಣ್ಣು ಮಕ್ಕಳನ್ನು ಸಂರಕ್ಷಿಸುವ ಸೂತ್ರಗಳನ್ನು ಒಳಗೊಂಡ ಕರ್ನಾಟಕ ರಾಜ್ಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣೆ ಕಾಯಿದೆ(ಇನ್ನು ಸರ್ಕಾರ ಅನುಮೋದಿಸಬೇಕಾಗಿದೆ)ಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದರ ಮೂಲಕ ಎಲ್ಲ ಮಕ್ಕಳಿಗೂ ರಕ್ಷಣೆ ದೊರೆಯುವಂತೆ ಸರ್ಕಾರ ನೋಡಿಕೊಳ್ಳಬೇಕು.

4.14. ಸದ್ಯ ಅಸ್ತಿತ್ವದಲ್ಲಿರುವ ಮಕ್ಕಳ ಬೆಂಬಲ, ಸಂರಕ್ಷಣೆ ಮತ್ತು ಪುನರ್ವಸತಿ ವ್ಯವಸ್ಥೆಯನ್ನು ಪರಾಮರ್ಶಿಸಿ ಅದರ ಗುಣಮಟ್ಟವನ್ನು ಸಬಲಗೊಳಿಸಬೇಕು. ಬಾಲ್ಯವಿವಾಹ, ದೇಹದ ಮಾರಾಟ ಮತ್ತು ಲೈಂಗಿಕ ದೌರ್ಜನ್ಯ ಮುಂತಾದ ಅಪಾಯಗಳಿಗೆ ತುತ್ತಾದ ಹೆಣ್ಣು ಮಕ್ಕಳಿಗೆ 'ಸಾಂತ್ವನ', 'ಉಜ್ವಲ' ಮತ್ತು ಇತರೆ ರಕ್ಷಣಾ ಕ್ರಮಗಳ ಮೂಲಕ ನೀಡುವ ಸೇವೆಯ ಗುಣಮಟ್ಟವನ್ನು ಉತ್ತಮ ಪಡಿಸುವುದು.

4.15. ಸರ್ಕಾರವು ರಾಜ್ಯಾದ್ಯಂತ ಮಕ್ಕಳ ಸಹಾಯವಾಹಿನಿಯನ್ನು ಸಾರ್ವತ್ರಿಕಗೊಳಿಸಬೇಕು. ಹೆಣ್ಣು ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಮಕ್ಕಳ ಸಹಾಯವಾಹಿನಿಯ ಪ್ರತಿಸ್ಪಂದನೆ ಕ್ರಮಗಳನ್ನು ಉತ್ತಮ ಪಡಿಸುವುದು ಮತ್ತು ಅದರ ಬಗ್ಗೆ ಜನಜಾಗೃತಿ ಉಂಟು ಮಾಡಬೇಕು. ಮಕ್ಕಳ ಸಹಾಯವಾಹನಿಯ ವ್ಯಾಪ್ತಿಯನ್ನು ವಿಸ್ತೃತಗೊಳಿಸಿ ಅದು ಕೌಟುಂಬಿಕ ದೌರ್ಜನ್ಯ, ಮಕ್ಕಳ ಅಪಹರಣ, ಮಕ್ಕಳ ಮಾರಾಟ ಮುಂತಾದ ಘಟನೆಗಳ ಸಂಗತಿಗಳನ್ನು ಒಳಗೊಳ್ಳುವಂತೆ ಮಾಡಬೇಕು.

4.16. ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಇಂದು ವ್ಯಾಪಕವಾಗಿ ನಡೆಯುತ್ತಿರುವ ಸೈಬರ್ ಅಪರಾಧ ಮತ್ತು ವಿದ್ಯುನ್ಮಾನ ಮಾಧ್ಯಮ ದುರ್ಬಳಕೆಯ ಪರಿಣಾಮಗಳನ್ನು ಮೊದಲು ಗುರುತಿಸಬೇಕು ಮತ್ತು ಅವುಗಳನ್ನು ತಡೆಯಲು ಜನಜಾಗೃತಿ ಮೂಡಿಸುವ ಮೂಲಕ, ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಮತ್ತು ಅದರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾದ ವ್ಯವಸ್ಥೆಯನ್ನು ಸಶಕ್ತವನ್ನಾಗಿಸುವ ಮೂಲಕ ಪ್ರಯತ್ನಿಸಬೇಕು.

4.17. ಅನಾಥಾಲಯಗಳಲ್ಲಿ, ನಿರಾಶ್ರಿತ ಮಕ್ಕಳು, ಕಾನೂನಿನಡಿಯಲ್ಲಿ ಸಿಲುಕಿರುವ ಮಕ್ಕಳು, ಸುದೀರ್ಘ ರೋಗಕ್ಕೆ/ಮಾನಸಿಕ ಅಸ್ವಸ್ಥತೆಗೆ ಮತ್ತು ದೈಹಿಕ ದೌರ್ಜನ್ಯಕ್ಕೆ ತುತ್ತಾದ ಹೆಣ್ಣು ಮಕ್ಕಳು ಸಮಾಜದ ಪ್ರಧಾನಧಾರೆಯಲ್ಲಿ ಬೆರೆಯುವುದಕ್ಕೆ ಮತ್ತು ಸಮಾಜದಲ್ಲಿ ವಿಲೀನಗೊಳ್ಳುವುದಕ್ಕೆ ಅನುಕೂಲವಾಗುವ ಯೋಜನೆಗಳನ್ನು ಸರ್ಕಾರ ಅಭಿವೃದ್ಧಿ ಪಡಿಸಬೇಕು. ಇದರ ಜೊತೆಗೆ ದೌರ್ಜನ್ಯದಿಂದ, ದೈಹಿಕ ಮಾರಾಟದ ಮತ್ತು ವೇಶ್ಯಾವಾಟಿಕೆ ಸಂಕೋಲೆಯಿಂದ ಬಿಡುಗಡೆ ಹೊಂದಿದ ಹೆಣ್ಣು ಮಕ್ಕಳ ಬದುಕನ್ನು ಸಂರಕ್ಷಿಸುವ ಯೋಜನೆಯನ್ನು ಸರ್ಕಾರವು ಅಭಿವೃದ್ಧಿ ಪಡಿಸಬೇಕು.

4.18. ಹೆಣ್ಣು ಮಕ್ಕಳು, ಹದಿಹರೆಯದ ಹೆಣ್ಣು ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವ, ಬಾಲ್ಯವಿವಾಹದ, ಅಪ್ರಾಪ್ತ ವಯಸ್ಸಿನಲ್ಲಿ ಗರ್ಭಿಣಿಯರಾಗುವ, ದೈಹಿಕ ದೌರ್ಜನದ, ಮಾನವ ಮಾರಾಟದ, ನಾರ್ಕೋಟಿಕ್ ಮದ್ದು ಮತ್ತು ಮಾನಸಿಕ ವ್ಯಸನದ ಮದ್ದುಗಳ ಮಾರಾಟದ ಅಪಾಯಗಳಿಂದ ಮಕ್ಕಳನ್ನು ಸಂರಕ್ಷಿಸುವ ಪರಿಣಾಮಕಾರಿ ವ್ಯವಸ್ಥೆಯನ್ನು ಸರ್ಕಾರವು ಅಭಿವೃದ್ಧಿ ಪಡಿಸಬೇಕು.

4.19. ಮಕ್ಕಳಿಗೆ ಸಂಬಂಧಿಸಿದ ಸಂಸ್ಥೆಗಳಾದ ಶಾಲೆಗಳು, ವಿದ್ಯಾರ್ಥಿ ನಿಲಯಗಳು, ಜುವಿನೈಲ್ ಜಸ್ಟೀಸ್ ಮಂದಿರಗಳು ಮುಂತಾದವುಗಳಲ್ಲಿ ಲೈಂಗಿಕ ಕಿರುಕುಳದ ದೂರುಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಮಹಿಳಾ ಸಮಿತಿಗಳನ್ನು ಸ್ಥಾಪಿಸಬೇಕು.

## 5. ಹೆಣ್ಣು ಮಕ್ಕಳ ಸಹಭಾಗಿತ್ವ

5.1. ಸಹಭಾಗಿತ್ವವು ಪರಭಾರೆ ಮಾಡಲಾಗದ ಪ್ರತಿ ಹೆಣ್ಣು ಮಗುವಿನ ಹಕ್ಕು. ಇದರ ಅರ್ಥವೇನೆಂದರೆ ಪ್ರತಿ ಮಗುವಿನ ಅಳಲನ್ನು ಜವಾಬುದಾರಿ ಇರುವ ಎಲ್ಲ ಹೊಣೆಗಾರರು ಆಲಿಸಬೇಕು ಮತ್ತು ಆಕೆಗೆ ಅಥವಾ ಆತನಿಗೆ ತನ್ನದೆ ಅಭಿಪ್ರಾಯವನ್ನು ಹೊಂದುವ ಹಕ್ಕಿರುತ್ತದೆ ಎಂಬುದನ್ನು ಗಮನಿಸಬೇಕು. ಹೆಣ್ಣು ಮಕ್ಕಳು ಎದುರಿಸುವ ತಾರತಮ್ಯ ಮತ್ತು ಹಿಂಸೆಯ ಹಿನ್ನೆಲೆಯಲ್ಲಿ ಎಲ್ಲ ಹೆಣ್ಣು ಮಕ್ಕಳು ತಮ್ಮ ಹಕ್ಕುಗಳನ್ನು ಅರಿತುಕೊಳ್ಳುವಂತೆ ಮಾಡುವುದು ಸರ್ಕಾರದ ಪ್ರಾಥಮಿಕ ಜವಾಬುದಾರಿ. ಪ್ರತಿ ಹೆಣ್ಣು ಮಗುವೂ ತನ್ನ ವಯೋಮಾನಕ್ಕೆ ಅನುಗುಣವಾಗಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು, ತನ್ನ ಮಾನಸಿನ ಪ್ರೌಢಿಮೆಗೆ ಅನುಗುಣವಾಗಿ ಹಾಗೂ ವಿಕಾಸಗೊಳ್ಳುತ್ತಿರುವ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ತಮ್ಮ ಆಕಾಂಕ್ಷೆಗಳನ್ನು ರೂಪಿಸಿಕೊಳ್ಳಲು ಅಗತ್ಯವಾದ ವಾತಾವರಣವನ್ನು ಸರ್ಕಾರವು ಒದಗಿಸಬೇಕಾಗುತ್ತದೆ. ಆ ಮೂಲಕ ತಮಗೆ ಸಂಬಂಧಿಸಿದ ಮತ್ತು ತಮ್ಮ ಬದುಕಿನ ಮೇಲೆ ಪ್ರಭಾವ ಬೀರುವ ಸಂಗತಿಗಳ ಬಗ್ಗೆ ಅವರು ಜ್ಞಾನ ಸಂಪಾದಿಸಬಹುದು ಮತ್ತು ತಮ್ಮ ಅಭಿವೃದ್ಧಿಗಾಗಿ ತಾವೇ ಪ್ರಯತ್ನಿಸಬಹುದು.

5.2. ಸರ್ಕಾರವು ಹೆಣ್ಣು ಮಕ್ಕಳಿಗೆ ಮನರಂಜನೆ ಮತ್ತು ಕ್ರೀಡೆಯ ಅವಕಾಶಗಳು ದೊರೆಯುವಂತೆ ಮಾಡಬೇಕು. ಹೆಣ್ಣು ಮಕ್ಕಳಿಗೆ ಕಲೆ, ಸಂಗೀತ, ನಾಟಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಸೃಜನಾತ್ಮಕ ವೇದಿಕೆಗಳನ್ನು ರೂಪಿಸಿಕೊಡಬೇಕು. ಗ್ರಾಮೀಣ ಮತ್ತು ನಗರ—ಎರಡೂ ಪ್ರದೇಶಗಳಲ್ಲಿ ಮೇಲೆ ತಿಳಿಸಿದ ಚಟುವಟಿಕೆಗಳಿಗೆ ಅಗತ್ಯವಾದ ಸಂಪನ್ಮೂಲವನ್ನು ಒದಗಿಸಬೇಕು. ಈ ಚಟುವಟಿಕೆಗಳಲ್ಲಿ ಪ್ರತಿಭೆಯನ್ನು ಪ್ರೋತ್ಸಾಹಿಸಲು ಸ್ಪರ್ಧೆಗಳನ್ನು ಏರ್ಪಡಿಸಬೇಕು, ಪ್ರಶಸ್ತಿಗಳನ್ನು ವಿತರಿಸಬೇಕು ಮತ್ತು ಉತ್ತೇಜನ ನೀಡಬೇಕು;

5.3. ಗ್ರಾಮೀಣ ಮತ್ತು ನಗರ-- ಪ್ರದೇಶಗಳೆರಡರಲ್ಲೂ ಸಮುದಾಯ ಆಧರಿತ ಚಟುವಟಿಕೆಗಳ ಮೂಲಕ ಲಿಂಗ ಸಂಬಂಧಿ ವಿಷಯಗಳ ಬಗ್ಗೆ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಜೊತೆ ಜೊತೆಯಾಗಿ ಚರ್ಚೆ ಮಾಡುವಂತೆ ಮತ್ತು ಸಂವಾದ ನಡೆಸುವಂತೆ ಸರ್ಕಾರ ವ್ಯವಸ್ಥೆ ಮಾಡಿಕೊಡಬೇಕು;

5.4. ಆಡಳಿತ ಪರಿಪಾಲನೆಯ ವಿವಿಧ ಮಟ್ಟಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಧರಿಸಿದ ಪೂರಕ ಕ್ರಮಗಳನ್ನು ಕುರಿತಂತೆ, ಹೆಣ್ಣು ಮಕ್ಕಳು ಒಳಗೊಳ್ಳುವಂತೆ ಮಾಡುವ ಹಾಗೂ ಅವರ ಸಹಭಾಗಿತ್ವವನ್ನು ಪ್ರೋತ್ಸಾಹಿಸುವ ಕ್ರಮಗಳಲ್ಲಿ, ಅದರಲ್ಲೂ ವಿಶೇಷವಾಗಿ ಅವರ ಮೇಲೆ ಪರಿಣಾಮ ಬೀರಬಲ್ಲ ಸಂಗತಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಸಮಾಲೋಚನೆಗಳಲ್ಲಿ ಹೆಣ್ಣು ಮಕ್ಕಳು ಸಹಭಾಗಿಗಳಾಗುವಂತೆ ಸರ್ಕಾರ ಅವಕಾಶಗಳನ್ನು ಮಾಡಿಕೊಡಬೇಕು;

5.5. ಕುಟುಂಬಗಳಲ್ಲಿ, ಸಮುದಾಯಗಳಲ್ಲಿ ಮತ್ತು ಶಾಲೆಗಳಲ್ಲಿ, ಅದರಲ್ಲೂ ಶಾಲೆಗಳಲ್ಲಿನ ವಿದ್ಯಾರ್ಥಿ ಮಂಡಳಿಗಳಲ್ಲಿ ಹಾಗೂ ನಗರ/ಗ್ರಾಮೀಣ ವಾರ್ಡ್ ಸಭೆಗಳಲ್ಲಿ ಹೆಣ್ಣು ಮಕ್ಕಳು ಮತ್ತು ಎಲ್ಲ ಮಕ್ಕಳು ಅರ್ಥ ಪೂರ್ಣವಾಗಿ ಹಾಗೂ ಸಶಕ್ತವಾಗಿ ಸಹಭಾಗಿಗಳಾಗುವಂತೆ ಸರ್ಕಾರ ಪ್ರೋತ್ಸಾಹಿಸಬೇಕು;

5.6. ನ್ಯಾಯ ವಿಚಾರಣೆಗೆ ಸಂಬಂಧಿಸಿದ ವಿಷಯಗಳಲ್ಲಿ ಮಕ್ಕಳ, ಅದರಲ್ಲೂ ದೌರ್ಜನ್ಯ ಮತ್ತು ಕ್ರೌರ್ಯಕ್ಕೆ ಬಲಿಯಾದ ಮಕ್ಕಳು ಅಥವಾ ಕಾನೂನಿನ ಜೊತೆಯಲ್ಲಿ ಸಂಘರ್ಷ ಎದುರಿಸುತ್ತಿರುವ ಮಕ್ಕಳು ಸಹಭಾಗಿಗಳಾಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಏಕೆಂದರೆ ಈ ವಿಷಯಗಳಿಗೆ ಸಂಬಂಧಿಸಿದ ತೀರ್ಮಾನಗಳು ಅವರ ಬದುಕಿನ ಮೇಲೆ ಪರಿಣಾಮ ಬೀರುತ್ತವೆ. ಆದ್ದರಿಂದ ಈ ವಿಷಯಕ್ಕೆ ಸಂಬಂಧದಿಂತೆ ಪ್ರಜ್ಞಾಪೂರ್ಣ ಆಯ್ಕೆ ಮಾಡಿಕೊಳ್ಳುವ ಅವಕಾಶಗಳು ಹೆಣ್ಣು ಮಕ್ಕಳಿಗಿರಬೇಕು.

5.7. ಹೆಣ್ಣು ಮಕ್ಕಳು ದೂರು-ದುಮ್ಮಾನಗಳನ್ನು ಹೇಳಿಕೊಳ್ಳುವ ಮತ್ತು ಅವರು ಹೇಳುವ ಸಂಗತಿಗಳನ್ನು ಎಲ್ಲ ಹಂತಗಳಲ್ಲಿನ ಎಲ್ಲ ಹೊಣೆಗಾರರು ಕೇಳಿಸಿಕೊಳ್ಳುವ ಅಗತ್ಯವಿದೆ. ಇದಕ್ಕಾಗಿ ಸರ್ಕಾರವು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕು.

* ಗ್ರಾಮ ಸಭೆಗಳಲ್ಲಿ(ಗ್ರಾಮ), ವಾರ್ಡ್ ಸಭೆಗಳಲ್ಲಿ(ನಗರ), ಜಿಲ್ಲಾ ಮಂಡಳಿಗಳಲ್ಲಿ ಮತ್ತು ರಾಜ್ಯ ಶಾಸನಾಂಗಗಳಲ್ಲಿ ಮಕ್ಕಳು ತಮ್ಮ ದೂರು-ದುಮ್ಮಾನಗಳನ್ನು ಹೇಳಿಕೊಳ್ಳುವ ಮತ್ತು ಅದನ್ನು ಸಂಬಂಧಿಸಿದ ಹೊಣೆಗಾರರೆಲ್ಲರೂ ಕೇಳಿಸಿಕೊಳ್ಳುವ ವ್ಯವಸ್ಥೆಯನ್ನು ಅಳವಡಿಸಬೇಕು ಮತ್ತು ಅದನ್ನು ಬಲಪಡಿಸಬೇಕು;
* ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಮತ್ತು ಎಲ್ಲ ಮಕ್ಕಳಿಗೆ ಸಂಬಂಧಿಸಿದ ಅಭಿವೃದ್ಧಿ ಯೋಜನೆ ರೂಪಿಸುವ ಪ್ರಕ್ರಿಯೆಯಲ್ಲಿ ಹೆಣ್ಣು ಮಕ್ಕಳು ಸಹಭಾಗಿಗಳಾಗುವಂತೆ ಮತ್ತು ಅವರು ತೊಡಗಿಕೊಳ್ಳುವಂತೆ ನೋಡಿಕೊಳ್ಳಬೇಕು;
* ಹೆಣ್ಣು ಮಕ್ಕಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸೃಜನಶೀಲವಾದ ಮತ್ತು ಆವಿಷ್ಕಾರಾತ್ಮಕವಾದ ವೇದಿಕೆಗಳನ್ನು ಒದಗಿಸಬೇಕು;
* ಎಲ್ಲ ಹಂತಗಳಲ್ಲಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಮಂಡಳಿಗಳಲ್ಲಿ ಅವರಿಗೆ ಪ್ರಾತಿನಿಧ್ಯ ಒದಗಿಸಬೇಕು ಮತ್ತು ಅದನ್ನು ಪ್ರೋತ್ಸಾಹಿಸಬೇಕು;
* ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕಿನ ಅವಕಾಶ ನೀಡಬೇಕು. ಏಕೆಂದರೆ ಹೆಣ್ಣು ಮಕ್ಕಳು ಅರ್ಥ ಪೂರ್ಣ ಆಯ್ಕೆಗಳನ್ನು ಮಾಡಿಕೊಳ್ಳಲು, ವಿಶ್ವಾಸಾರ್ಹ ಮನೋಭಾವ ಬೆಳೆಸಿಕೊಳ್ಳಲು ಹಾಗೂ ಮಕ್ಕಳ ಬದುಕಿನ ಮೇಲೆ ಪ್ರಭಾವ ಬೀರಬಲ್ಲ ಸಂಗತಿಗಳನ್ನು ಕುರಿತಂತೆ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಲು ಮಾಹಿತಿಯು ಮೂಲಾಧಾರವಾಗಿದೆ.

5.8. ಹೆಣ್ಣು ಮಕ್ಕಳು ಮತ್ತು ಸಾಮಾನ್ಯ ಎಲ್ಲ ಮಕ್ಕಳು ವ್ಯಕ್ತ ಪಡಿಸುವ ಅಭಿಪ್ರಾಯಗಳಿಗೆ ಜವಾಬುದಾರಿ ಪ್ರೌಢರು ಗಮನ ನೀಡಲು ಮತ್ತು ಅದಕ್ಕೆ ಸಂಬಂಧಸಿದಂತೆ ಮಕ್ಕಳ ಅಭಿಪ್ರಾಯವನ್ನು ಕೇಳುವುದು ಮತ್ತು ಆಲಿಸುವುದು ಸಾಧ್ಯವಾಗುವಂತೆ ಪ್ರೌಢರ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ವ್ಯವಸ್ಥೆಯೊಂದನ್ನು ಸ್ಥಾಪಿಸಬೇಕು. ಈ ವ್ಯವಸ್ಥೆಯಲ್ಲಿನ ಚರ್ಚೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಹೆಣ್ಣು ಮಕ್ಕಳು ಪರಿಣಾಮಕಾರಿಯಾಗಿ ಸಹಭಾಗಿಗಳಾಗಲು ಸರ್ಕಾರ ಅವಕಾಶ ಮಾಡಿಕೊಡಬೇಕು.

## 6. ಸಮಾಲೋಚನೆ ಮತ್ತು ಸಹಪಾಲಿಕೆ

6.1. ಜ್ಞಾನವನ್ನು, ಪ್ರಾವೀಣ್ಯತೆಯನ್ನು ಮತ್ತು ಹಣಕಾಸು ಸಂಪನ್ಮೂಲವನ್ನು ಕಾರ್ಯನೀತಿಯ ಅನುಷ್ಠಾನಕ್ಕೆ ಬೆಂಬಲವಾಗಿ ಸಂಘಟಿಸಲು ಮತ್ತು ವಿತರಣೆ ಮಾಡಿಕೊಳ್ಳಲು ಅಗತ್ಯವಾದ ವಿವಿಧ ಬಗೆಯ ಹೊಣೆಗಾರರ ಸಹಪಾಲಿಕೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲಾಗುವುದು. ಎಲ್ಲ ಹೊಣೆಗಾರರು, ಅಂದರೆ, ವ್ಯಕ್ತಿಗಳು, ಕುಟುಂಬಗಳು,

ಸ್ಥಳೀಯ ಸಮುದಾಯಗಳು, ಸರ್ಕಾರೇತರ ಸಂಘಟನೆಗಳು, ನಾಗರಿಕ ಸಮಾಜ, ಮಾಧ್ಯಮ ಮತ್ತು ಖಾಸಗಿ ವಲಯ ಹಾಗೂ ಸರ್ಕಾರಗಳ ಕ್ರಿಯಾಶೀಲ ತೊಡಗುವಿಕೆಯನ್ನು, ಸಹಪಾಲಿಕೆಯನ್ನು ಮತ್ತು ಸಂಘಟಿತ ಪ್ರಯತ್ನವನ್ನು ಹೆಣ್ಣು ಮಕ್ಕಳು ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸರ್ಕಾರವು ಪ್ರೋತ್ಸಾಹಿಸುತ್ತದೆ.

6.2. ಸೇವೆಯನ್ನು ಒದಗಿಸುವ, ನ್ಯಾಯವನ್ನು ನೀಡುವ ವ್ಯವಸ್ಥೆಯನ್ನು ಮತ್ತು ಅವುಗಳ ರಚನೆಗಳನ್ನು ಹೆಣ್ಣು ಮಕ್ಕಳ ವಿಷಯದಲ್ಲಿ ಪ್ರತಿಸ್ಪಂದಿಸುವಂತೆ ಮತ್ತು ಸಂವೇದನಾಶೀಲವಾಗಿರುವಂತೆ ಸರ್ಕಾರವು ರೂಪಿಸಬೇಕು. ಆ ಮೂಲಕ ಸಾರ್ವಜನಿಕ ಉತ್ತರದಾಯಿತ್ವವನ್ನು ಮತ್ತು ಪಾರದರ್ಶಕತೆಯನ್ನು ಸಾಧಿಸಿಕೊಳ್ಳಬೇಕು. ವಿವಿಧ ಪ್ರದೇಶಗಳಲ್ಲಿನ ಉತ್ತಮ ಆಚರಣೆಯ ಯಶಸ್ವಿ ಯಶೋಗಾಥೆಯಿಂದ ಪಾಠವನ್ನು ಕಲಿಯಲಾಗುವುದು ಮತ್ತು ಸಮಾಜದ ಎಲ್ಲ ಪ್ರಗತಿಶೀಲ ಸಂಘ–ಸಂಘಟನೆಗಳ ಜೊತೆಯಲ್ಲಿ ಸಂಪರ್ಕ ಜಾಲವನ್ನು ರೂಪಿಸಲಾಗುವುದು.

## 7. ಸಹಯೋಗ, ಸಮನ್ವಯ ಮತ್ತು ಮೇಲ್ವಿಚಾರಣೆ

7.1. ಸಮಾನತೆ ಅನ್ನುವುದು, ಅದರಲ್ಲೂ ಲಿಂಗ ಸಂಬಂಧಗಳ ವಿಷಯದಲ್ಲಿ ಎಲ್ಲ ಬಗೆಯ ಗಂಡಾಂತರಗಳ ಬಗೆಗಿನ ಕಾಳಜಿಗಳ ಒಗ್ಗೂಡುವಿಕೆಯನ್ನು ಅವಲಂಬಿಸಿದೆ. ಇದಕ್ಕಾಗಿ ಎಲ್ಲ ಇಲಾಖೆಗಳನ್ನು ಒಳಗೊಳ್ಳುವಂತೆ ಮತ್ತು ಮಕ್ಕಳ ಮೇಲೆ ಅವುಗಳು ಉಂಟು ಮಾಡುವ ಪರಿಣಾಮಗಳನ್ನು ಅಂತರ್ಗತಗೊಳಿಸುತ್ತ ಸ್ನಿಗ್ಧ ರೂಪದಲ್ಲಿ ಸಮಗ್ರ ಕಾರ್ಯಕ್ರಮಗಳನ್ನು ರೂಪಿಸ ಬೇಕಾಗುತ್ತದೆ. ಈ ಕಾರ್ಯನೀತಿಯ ಅನುಷ್ಠಾನಕ್ಕೆ ಪರಿಣಾಮಕಾರಿ, ಉತ್ತರಧಾಯಿತ್ವದಿಂದ ಕೂಡಿದ ಮತ್ತು ಪಾರದರ್ಶಕ ಸಂಸ್ಥೆಗಳನ್ನು ಎಲ್ಲ ಹಂತಗಳಲ್ಲೂ ಸ್ಥಾಪಿಸಬೇಕಾಗುತ್ತದೆ. ಇದನ್ನು ಸಾಧಿಸಿಕೊಳ್ಳಲು ಪ್ರತಿಸ್ಪಂದಿ, ಎಲ್ಲರನ್ನು ಒಳಗೊಳ್ಳುವ, ಸಹಭಾಗಿತ್ವದ ಮತ್ತು ಪ್ರಾತಿನಿಧಿಕವಾದ ತೀರ್ಮಾನಗಳನ್ನು ತೆಗೆದುಕೊಳ್ಳುವ ರಚನೆಗಳನ್ನು, ಕಾರ್ಯಯಂತ್ರವನ್ನು ಮತ್ತು ಪ್ರಕ್ರಿಯೆಯನ್ನು ರೂಪಿಸಲಾಗುವುದು. ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಸರ್ಕಾರ ಬೆಂಬಲತ ನೀತಿಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವ, ಅನುಷ್ಠಾನಗೊಳಿಸುವ, ಮೇಲ್ವಿಚಾರಣೆ ನಡೆಸುವ ಮತ್ತು ಮೌಲ್ಯಮಾಪನ ಮಾಡುವ ಕಾರ್ಯಗಳಲ್ಲಿ ವಿವಿಧ ಬಗೆಯ ಹೊಣೆಗಾರರೆಲ್ಲರ ಸಹಭಾಗಿತ್ವವನ್ನು ಸರ್ಕಾರವು ಸಾಧಿಸಿಕೊಳ್ಳಬೇಕು. ಸರ್ಕಾರ, ಸರ್ಕಾರೇತರ ಸಂಘಟನೆಗಳು, ಧಾರ್ಮಿಕ ಸಂಸ್ಥೆಗಳು ಮತ್ತು ಇತರೆ ಖಾಸಗಿ ಕ್ಷೇತ್ರದ ಸಂಘ–ಸಂಘಟನೆಗಳು ಮಕ್ಕಳಿಗೆ ಸಂಬಂಧಿಸಿದಂತೆ ಒದಗಿಸುವ ಸೇವೆಗಳ ಕಾರ್ಯವ್ಯಾಪ್ತಿ ಮತ್ತು ಗುಣಮಟ್ಟದ ಮೇಲೆ ಪರಿಣಾಮಕಾರಿ ಮೇಲ್ವಿಚಾರಣೆ ಕ್ರಮಗಳನ್ನು ಸರ್ಕಾರವು ಕೈಗೊಳ್ಳಬೇಕು.

7.2. ಈ ಕಾರ್ಯನೀತಿಯ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಸಹಯೋಗದ ಜವಾಬುದಾರಿಯು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯದಾಗಿರುತ್ತದೆ. ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿತವಾಗುವ ಮಕ್ಕಳ ರಾಜ್ಯ ಸಮನ್ವಯ ಮತ್ತು ಕ್ರಿಯಾಯೋಜನೆ ಗುಂಪು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಇತರೆ ಇಲಾಖೆಗಳ ನೆರವಿನೊಂದಿಗೆ ಸದರಿ ಕಾರ್ಯನೀತಿಯ ಪ್ರಗತಿಯನ್ನು ಪರಿಶೀಲಿಸಬೇಕು. ಏಕೆಂದರೆ ಈ ಇಲಾಖೆಗಳ ಅಧಿಕಾರಿಗಳು ಸದರಿ ಗುಂಪಿನ ಸದಸ್ಯರಾಗಿರುವುದರಿಂದ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಕ್ರಿಯಾಯೋಜನೆಯ ಅನುಷ್ಠಾನಕ್ಕೆ ವಿಶೇಷ ಗಮನ ನೀಡುವುದು ಸಾಧ್ಯವಾಗುತ್ತದೆ. ಇದೇ ರೀತಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಸಮನ್ವಯ ಮತ್ತು ಕ್ರಿಯಾಯೋಜನೆ ಗುಂಪನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಸದಸ್ಯ ಕಾರ್ಯದರ್ಶಿ ನೇತೃತ್ವದಲ್ಲಿ ರಚಿಸಬೇಕು. ಜಿಲ್ಲಾ ಮಟ್ಟದಲ್ಲಿ ನಡೆಯುವ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (ಕೆಡಿಪಿ) ಮತ್ತು ಜಿಲ್ಲಾ ಮಕ್ಕಳ ಸಂರಕ್ಷಣಾ ಸಮಿತಿಯ ಸಭೆಗಳ ಅಜೆಂಡದಲ್ಲಿ ಹೆಣ್ಣು ಮಕ್ಕಳಿಗೆ ವಿಶಿಷ್ಟವಾದ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯನ್ನು ಅಂತರ್ಗತಗೊಳಿಸಬೇಕು.

7.3. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಇತರೆ ಇಲಾಖೆಗಳ ಜೊತೆಯಲ್ಲಿ ಸಮಾಲೋಚಿಸಿ ಮಕ್ಕಳ ರಾಜ್ಯ ಕ್ರಿಯಾಯೋಜನೆಯನ್ನು ರೂಪಿಸಬೇಕು. ಇದೇ ರೀತಿಯ ಕ್ರಿಯಾಯೋಜನೆಗಳನ್ನು ಜಿಲ್ಲೆ ಮತ್ತು ಸ್ಥಳೀಯ ಮಟ್ಟದಲ್ಲಿ ರಚಿಸಿ ಕಾರ್ಯನೀತಿಯ ಕಾರ್ಯಾಚರಣೆ ಮತ್ತು ಅನುಷ್ಠಾನಕ್ಕೆ ಅಗತ್ಯವಾದ ಮಾರ್ಗದರ್ಶಿ ಸೂತ್ರಗಳನ್ನು ಕಾರ್ಯನೀತಿಯಲ್ಲಿನ ಸೂತ್ರಗಳಿಗೆ ಅನುಗುಣವಾಗಿ ರೂಪಿಸಬೇಕು. ಈ ಕ್ರಿಯಾಯೋಜನೆಗಳ ಅಡಿಯಲ್ಲಿ ರೂಪಿಸುವ ಕಾರ್ಯಕ್ರಮಗಳ ಅನುಷ್ಠಾನದ ಪ್ರಗತಿಯನ್ನು ರಾಜ್ಯ ಮತ್ತು ಜಿಲ್ಲಾ ಸಮನ್ವಯ ಮತ್ತು ಕ್ರಿಯಾಯೋಜನೆ ಗುಂಪು ಮೇಲ್ವಿಚಾರಣೆ ನಡೆಸುತ್ತಿರಬೇಕು.

7.4. ಈ ಕಾರ್ಯನೀತಿಯ ನಿರ್ದೇಶನದಂತೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗವು ಸದರಿ ಕಾರ್ಯನೀತಿಯ ನಿಯಮಗಳಿಗೆ ರೂಪಿಸುವ ಮಕ್ಕಳ ಮೇಲೆ ಪರಿಣಾಮ ಬೀರುವ ಕಾನೂನುಗಳು, ನೀತಿಗಳು ಮತ್ತು ಕಾರ್ಯಕ್ರಮಗಳಿಗೆ ಎಲ್ಲ ವಲಯಗಳಲ್ಲಿ ಮತ್ತು ಎಲ್ಲ ಹಂತಗಳಲ್ಲಿ ಮನ್ನಣೆ ದೊರೆಯುವಂತೆ ನೋಡಿಕೊಳ್ಳಬೇಕು. ಇದಲ್ಲದೆ ಅದು ಕಾರ್ಯನೀತಿಯ ಅನುಷ್ಠಾನದ ಮೇಲ್ವಿಚಾರಣೆ ನಡೆಸಬೇಕು ಮತ್ತು ಕಾರ್ಯನೀತಿಯ ಸೂತ್ರಗಳ ಉಲ್ಲಂಘನೆಯನ್ನು ಸರ್ಕಾರಕ್ಕೆ ವರದಿ ಮಾಡುತ್ತಿರಬೇಕು. ಈ ಕಾರ್ಯನೀತಿಯ ಪಾತ್ರ ಮತ್ತು ಜವಾಬುದಾರಿಯನ್ನು ಪೂರೈಸಲು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವು ಅಗತ್ಯ ಬಿದ್ದರೆ ಕಾರ್ಯನೀತಿಗೆ ಆಡಳಿತಾತ್ಮಕ ಮತ್ತು ಕಾರ್ಯಕ್ರಮ ರೂಪದಲ್ಲಿ ಶಕ್ತಿ ತುಂಬಬಹುದು.

7.5. ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಮತ್ತು ಅವುಗಳ ಬಗ್ಗೆ ಕಾರ್ಯಾಚರಣೆ ನಡೆಸಲು ಅನುಕೂಲವಾಗುವಂತೆ ವರ್ಷಕ್ಕೊಮ್ಮೆ ರಾಜ್ಯ ಶಾಸನ ಸಭೆಯ ಒಂದು ಅಧಿವೇಶನವನ್ನು ಮಕ್ಕಳ ಮತ್ತು ಹೆಣ್ಣು ಮಕ್ಕಳ ಕುರಿತ ವಿಷಯಕ್ಕೆ ಸಂಬಂಧಿಸಿದಂತೆ ನಡೆಸಬೇಕು.

## 8. ಸಂಶೋಧನೆ, ದಾಖಲೀಕರಣ ಮತ್ತು ಸಾಮರ್ಥ್ಯ ನಿರ್ಮಾಣ

8.1. ಈ ಕಾರ್ಯನೀತಿಯ ಅನುಷ್ಠಾನಕ್ಕೆ ಅಗತ್ಯವಾದ ಬೆಂಬಲಕ್ಕಾಗಿ ಮಕ್ಕಳ ಸ್ಥಿತಿಗತಿ ಮತ್ತು ಸ್ಥಾನಮಾನಕ್ಕೆ ಸಂಬಂಧಿಸಿದ ಎಲ್ಲ ಆಯಾಮಗಳನ್ನು ಪರಿಗಣಿಸಿ ಸಮಗ್ರ ಮತ್ತು ವಿಶ್ವಾಸಾರ್ಹ ಜ್ಞಾನ ಮಾಹಿತಿ ಕೋಶವನ್ನು ಅಭಿವೃದ್ಧಿ ಪಡಿಸಬೇಕು. ಹೆಣ್ಣು ಮಕ್ಕಳನ್ನು ಅನುಲಕ್ಷಿಸಿ ನಡೆದ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಸಂಶೋಧನೆ ಮತ್ತು ದಾಖಲೀಕರಣ ವರದಿಗಳಿಂದ ಪಡೆದ ಅಂಕಿಅಂಶಗಳನ್ನು ಆಧರಿಸಿ ಸದರಿ ಜ್ಞಾನ ಮಾಹಿತಿ ಕೋಶವನ್ನು ರಚಿಸಬೇಕು. ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳಲು ತಡೆಯೊಡ್ಡುತ್ತಿರುವ ಪ್ರಧಾನ ಅಡ್ಡಿ ಆತಂಕಗಳನ್ನು ದಾಖಲಿಸಿ ಅವುಗಳನ್ನು ವಾರ್ಷಿಕ ಪ್ರಕಟಣೆಯಾಗಿ ಹೊರತರಬೇಕು.

8.2. ನಿಯಮಿತವಾಗಿ ಕಾಲಕಾಲಕ್ಕೆ ಸದರಿ ಕಾರ್ಯಕ್ರಮಗಳ ಮತ್ತು ಸಮುದಾಯ ಆಧರಿತ ಕ್ರಮಗಳ ಲಾಭ ಎಷ್ಟರ ಮಟ್ಟಿಗಾಗಿದೆ ಎಂಬುದರ ಬಗ್ಗೆ ಸಾಮಾಜಿಕ ಆಡಿಟ್ ವಿಧಾನವನ್ನು ಅನುಸರಿಸಿ ಮೌಲ್ಯಮಾಪನ ನಡೆಸಬೇಕು. ಮಕ್ಕಳ ಮೇಲೆ ಉಂಟಾಗುವ ಪರಿಣಾಮಗಳನ್ನು ತಿಳಿಸುವ ಸೂಚಿಗಳು ಮತ್ತು ಆಡಿಟ್ ವರದಿಗಳು ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಯೋಜನೆ, ಕಾರ್ಯಕ್ರಮಗಳ ಮತ್ತು ನೀತಿಗಳ ಮೌಲ್ಯಮಾಪನ ಮತ್ತು ಸ್ಥಿತಿಗತಿಗಳ ಪರಾಮರ್ಶೆಗೆ ಆಧಾರವಾಗಿರಬೇಕು.

8.3. ರಾಜ್ಯ ಸರ್ಕಾರವು ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣಾ ವ್ಯವಸ್ಥೆಯನ್ನು ತೀವ್ರ ಗತಿಯಲ್ಲಿ ಉತ್ತಮ ಪಡಿಸುವುದರ ಬಗ್ಗೆ ತನ್ನ ಬದ್ಧತೆಯನ್ನು ಪ್ರದರ್ಶಿಸಬೇಕು. ಎಲ್ಲ ಬಗೆಯ ಸ್ಥಿತಿಯಲ್ಲಿರುವ ಮಕ್ಕಳ ಪ್ರಗತಿಯನ್ನು ವಿಶ್ಲೇಷಿಸಲು ಅನುಕೂಲವಾಗುವಂತೆ ಸಂಗ್ರಹಿಸಿದ ಮಾಹಿತಿಯನ್ನು ವಯೋಮಾನ, ಲಿಂಗ, ಭೌಗೋಳಿಕ ಪ್ರದೇಶ, ಬುಡಕಟ್ಟು, ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಸಾಮಾಜಿಕ ಹಾಗೂ ಆರ್ಥಿಕ ಗುಂಪುಗಳ ಹಿನ್ನೆಲೆಯಲ್ಲಿ ವರ್ಗೀಕರಿಸಿ ಸಂಘಟಿಸಬೇಕು. ಈ ಬಗೆಯ ಮಾಹಿತಿ ಕೋಶದಲ್ಲಿ ಪ.ಜಾ, ಪ.ಪಂ ಮತ್ತು ಅಲ್ಪಸಂಖ್ಯಾತ ಗುಂಪಿಗೆ ಸೇರಿದ ಹೆಣ್ಣು ಮಕ್ಕಳ ಸ್ಥಿತಿಗತಿ ಮತ್ತು ಸ್ಥಾನಮಾನದಲ್ಲಿನ ಭಿನ್ನತೆಗಳ ಪ್ರಾದೇಶಿಕ ಮತ್ತು ಜಿಲ್ಲಾ ಮಟ್ಟದ ಸಂಗತಿಗಳನ್ನು ಪ್ರಧಾನವಾಗಿ ಗುರುತಿಸಬೇಕು. ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ರೂಪಿಸುವುದಕ್ಕೆ ದಾಖಲೆಗಳು ಮತ್ತು ಸಂಶೋಧನೆಗಳ ಫಲಿತಗಳು ಆಧಾರವಾಗಿರಬೇಕು. ಈ ಬಗೆಯ ಮಾಹಿತಿಯನ್ನು ಆಡಳಿತದ ಎಲ್ಲ ಹಂತಗಳಲ್ಲಿ ಪ್ರಗತಿ ಪರಿಶೀಲನೆಗೆ ಬಳಸಿಕೊಳ್ಳುವುದನ್ನು ಪ್ರೋತ್ಸಾಹಿಸಬೇಕು. ಈ ಮಾಹಿತಿಯನ್ನು ಸಂಬಂಧಿಸಿದ ವೆಬ್ ತಾಣಗಳಲ್ಲಿ ಪ್ರಕಟಿಸಬೇಕು ಮತ್ತು ಅಧಿಕಾರಿಗಳು, ಪ್ರಕಾರ್ಯದ ಜವಾಬುದಾರಿ ಹೊಂದಿರುವವರು ಮತ್ತು ಸಮುದಾಯಗಳ ಜೊತೆಯಲ್ಲಿ ಅದನ್ನು ಹಂಚಿಕೊಳ್ಳಬೇಕು.

8.4. ರಾಜ್ಯದೊಳಗೆ ಹೆಣ್ಣು ಮಕ್ಕಳ ಸ್ಥಿತಿಗತಿಗಳಲ್ಲಿನ ಅಸಮಾನತೆ ಮತ್ತು ಉದ್ಭವವಾಗುತ್ತಿರುವ ಸಮಸ್ಯೆಗಳಂತಹ ಗಮನ ಸೆಳೆಯುವ ವಿಷಯಗಳ ಬಗ್ಗೆ ಶೈಕ್ಷಣಿಕ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಅಧ್ಯಯನ, ವಿಶ್ಲೇಷಣೆ ಮತ್ತು ಸಮೀಕ್ಷೆ ನಡೆಸುವಂತೆ ಸರ್ಕಾರವು ಪ್ರೋತ್ಸಾಹ ನೀಡಬೇಕು.

8.5. ಸರ್ಕಾರವು ಸೂಕ್ತವಾದ ರೀತಿಯಲ್ಲಿ ಸಿಬ್ಬಂದಿಯನ್ನು ಆಯ್ಕೆ ಮಾಡುವದರ ಮೂಲಕ ಮತ್ತು ಅದಕ್ಕೆ ಸಂಬಂಧಿಸಿದ ಸಾಮರ್ಥ್ಯ ನಿರ್ಮಾಣ ಪ್ರಯತ್ನಗಳ ಮೂಲಕ ಕಾರ್ಯನೀತಿಗೆ ಸಂಬಂಧಿಸಿದ ಎಲ್ಲ ಬಗೆಯ ಯೋಜನೆ ಸಿದ್ದಪಡಿಸುವ, ಅನುಷ್ಠಾನಗೊಳಿಸುವ ಮತ್ತು ನಿರ್ವಹಣೆ ಮಾಡುವ ಕ್ರಮಗಳಲ್ಲಿ ವೃತ್ತಿಪರತೆ, ತಾಂತ್ರಿಕ ಪ್ರಾವೀಣ್ಯತೆ ಮತ್ತು ಸಾಮರ್ಥ್ಯ ಎಲ್ಲ ಹಂತಗಳಲ್ಲಿ ಮತ್ತು ಎಲ್ಲ ವಲಯಗಳಲ್ಲಿ ಇರುವಂತೆ ನೋಡಿಕೊಳ್ಳಬೇಕು.

8.6. ಮಕ್ಕಳಿಗೆ ಸಂಬಂಧಿಸಿದ ಕಾರ್ಯಗಳ ನಿರ್ವಹಣೆ ಮಾಡುವ ಸಿಬ್ಬಂದಿಗೆ ನೇಮಕಾತಿಯ ಸಂದರ್ಭದಲ್ಲಿ ಮಕ್ಕಳ ಹಕ್ಕುಗಳ, ಅದರಲ್ಲೂ ಹೆಣ್ಣು ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಹೆಣ್ಣು ಮಕ್ಕಳ ಹಕ್ಕುಗಳ ಬಗ್ಗೆ ಶಿಕ್ಷಣ ನೀಡುವ ಕೆಲಸ ಮಾಡಬೇಕು. ಸಿಬ್ಬಂದಿಯ ಜವಾಬುದಾರಿ ಮತ್ತು ಕರ್ತವ್ಯಗಳ ವ್ಯಾಪ್ತಿಯನ್ನು ಮೀರಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಅವರಿಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಶಿಕ್ಷಣ ಮತ್ತು ಪುನರ್ ಮನನ ತರಬೇತಿ ಕಾರ್ಯಗಾರಗಳನ್ನು ಆಯೋಜಿಸಬೇಕು.

8.7. ಮಕ್ಕಳಿಗೆ, ಅದರಲ್ಲೂ ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಕೆಲಸ ಮಾಡುವ ಸಿಬ್ಬಂದಿಯ ಬದ್ಧತೆಯನ್ನು ಪ್ರೋತ್ಸಾಹಿಸುವ ಮತ್ತು ಅವರಿಗೆ ಪ್ರೇರಣೆ ನೀಡುವ ಕೆಲಸವನ್ನು ಸರ್ಕಾರ ಮಾಡಬೇಕು. ಈ ಸಿಬ್ಬಂದಿಯು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ಉಂಟಾಗುವ ಸಾಧನೆ ಮತ್ತು ಲೋಪ ದೋಷಗಳಿಗೆ ಅವರೇ ಉತ್ತರದಾಯಿಯಾಗಿರುತ್ತಾರೆ ಎಂಬುದನ್ನು ಖಚಿತಪಡಿಸಬೇಕು.

## 9. ಸಂಪನ್ಮೂಲ ವಿನಿಯೋಜನೆ

9.1. ಈ ಕಾರ್ಯನೀತಿಯ ಅನುಷ್ಠಾನಕ್ಕೆ ಅಗತ್ಯವಾದ ಸಂಪನ್ಮೂಲ, ಸಾಮಗ್ರಿಗಳು ಮತ್ತು ಮಾನವ ಸಂಪನ್ಮೂಲವನ್ನು ಒದಗಸುವುದಕ್ಕೆ, ಅವುಗಳನ್ನು ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ಹಾಗೂ ಪಾರದರ್ಶಕತೆಯಿಂದ ಮತ್ತು ಉತ್ತರದಾಯಿ ಕ್ರಮಗಳ ಮೂಲಕ ಬಳಸಿಕೊಳ್ಳುವುದಕ್ಕೆ ಸರ್ಕಾರವು ಬದ್ಧವಾಗಿರುತ್ತದೆ.

9.2. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ತತ್ಸಂಬಂಧಿ ಇಲಾಖೆಗಳ ನೆರವಿನಿಂದ ಮಕ್ಕಳ ಬಜೆಟ್ ಮತ್ತು ಹೆಣ್ಣು ಮಕ್ಕಳ ಬಜೆಟ್ ಸಿದ್ಧಪಡಿಸುವ ಕಾರ್ಯದ ನಾಯಕತ್ವ ವಹಿಸಬೇಕು. ಬಜೆಟ್ಟಿನಲ್ಲಿ ಮಕ್ಕಳ, ಹೆಣ್ಣು ಮಕ್ಕಳ ಅಭಿವೃದ್ಧಿಗೆ ಒದಗಸಿದ ಹಣಕಾಸು ಮೊತ್ತ ಹಾಗೂ ಅದರ ವೆಚ್ಚಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲದ ವಿನಿಯೋಜನೆ ಮತ್ತು ಬಳಕೆಯ ಮೇಲೆ ಹಾಗೂ ಅವು ಮಕ್ಕಳ ಮೇಲೆ, ಹೆಣ್ಣು ಮಕ್ಕಳ ಮೇಲೆ ಉಂಟು ಮಾಡುವ ಪರಿಣಾಮಗಳ ಫಲಶೃತಿ ಸೂಚಿಗಳ ಬಗ್ಗೆ ಆಡಳಿತ ಎಲ್ಲ ಹಂತಗಳಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಇಲಾಖೆಗಳ ಮೇಲೆ ನಿಗಾ ಇಡುವ ಕೆಲಸವನ್ನು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನಡೆಸಬೇಕು.

## 10. ಕಾರ್ಯನೀತಿಯ ಪರಾಮರ್ಶೆ

10.1. ಈ ಕಾರ್ಯನೀತಿಯ ಕ್ರಿಯಾ ಯೋಜನೆಯ ಅನುಷ್ಟಾನದ ಪರಾಮರ್ಶೆಯನ್ನು ವಾರ್ಷಿಕವಾಗಿ ನಡೆಸಬೇಕು. ಕಾರ್ಯನೀತಿಯು ಅನುಷ್ಠಾನಗೊಂಡ ಮೂರು ವರ್ಷಗಳ ನಂತರ ಅದರ ಮಧ್ಯಂತರ ಪರಾಮರ್ಶೆಯನ್ನು ಮತ್ತು ಐದು ವರ್ಷಗಳ ನಂತರ ಅದರ ಸಮಗ್ರ ಪರಾಮರ್ಶೆಯನ್ನು ಮಕ್ಕಳು, ಪಾಲಕರು, ಸರ್ಕಾರೇತರ ಸಂಘಟನೆಗಳು ಮತ್ತು ಇದರಲ್ಲಿ ಆಸಕ್ತಿ ಇರುವ ಹಾಗೂ ಸಂಬಂಧಿಸಿದ ಸಂಸ್ಥೆಗಳ ಜೊತೆ ಸಮಾಲೋಚಿಸಿ ನಡೆಸಬೇಕು. ಸಾಮಾಜಿಕ ಆಡಿಟ್ ವಿಧಾನಗಳಾದ ಮಕ್ಕಳ ನೇತೃತ್ವದ ಪರಾಮರ್ಶೆ ಮತ್ತು ಸಮುದಾಯ ಮತ್ತು ಮಕ್ಕಳ ಸಹಭಾಗಿತ್ವದ ಮೌಲ್ಯಮಾಪನಗಳು ಹಾಗೂ ಪ್ರತ್ಯಕ್ಷ ಕ್ಷೇತ್ರಾಧರಿತ ಅಧ್ಯಯನಗಳು ಹೆಚ್ಚು ಅರ್ಥ ಪೂರ್ಣವಾಗಿರಬಲ್ಲವು.

10.2. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪರಾಮರ್ಶೆಯ ನೇತೃತ್ವ ವಹಿಸಬೇಕು. ಈ ಬಗೆಯ ಪರಾಮರ್ಶೆಯ ಫಲಿತಗಳು ಹಾಗೂ ತೀರ್ಮಾನಗಳು ಕಾರ್ಯನೀತಿಗೆ ಸಂಬಂಧಿಸಿದ ಯೋಜನೆ, ಕಾರ್ಯಕ್ರಮದ ಕಾರ್ಯಸೂಚಿ ಮತ್ತು ಪ್ರಕ್ರಿಯೆಗಳ ಮೌಲ್ಯಮಾಪನಕ್ಕೆ ಆಧಾರವಾಗಿರಬೇಕು. ಈ ಬಗೆಯ ಪರಾಮರ್ಶೆ ಮತ್ತು ಮೌಲ್ಯಮಾಪನಗಳು ಮಕ್ಕಳ ಶಾಸನಗಳಿಗೆ ಸಂಬಂಧಿಸಿದಂತಿರಬೇಕು. ಈ ಕಾರ್ಯನೀತಿಯ ನಿಯಮಗಳ ಆಧಾರದಲ್ಲಿ ರಾಜ್ಯಮಟ್ಟದಲ್ಲಿ ಮಕ್ಕಳ, ಹೆಣ್ಣು ಮಕ್ಕಳ ಹಕ್ಕುಗಳ ಶಾಸನಗಳ ಚೌಕಟ್ಟನ್ನು ಸೌಹಾರ್ದಯುತವಾಗುವಂತೆ ಮತ್ತು ಪರಸ್ಪರ ಹೊಂದಾಣಕೆಯಾಗುವಂತೆ ರೂಪಿಸಬೇಕು.